ಏವಂ ವ್ಯಾಖ್ಯಾನ ಕ್ರಮಮವಾಪ್ತವಾಹನ್ ಪರಮಗುರುಪರಂಪರಯಾ ।
ಆಗಚ್ಛನ್ ಸಿದ್ಧಾಂತೋ ದ್ವಿವಿಧೋಪ್ಯತಿನಿಶಿತ ಬುದ್ಧಿಭ್ಯಾಂ ॥೧೭೧॥

ಶುಭ–ರವಿ–ನಂದಿ ಮುನಿಭ್ಯಾಂ ಭೀಮರಥಿ–ಕೃಷ್ಣ ಮೇಖಲಯೋಃ ಸರಿತೋಃ ।
ಮಧ್ಯಮ ವಿಷಯೇ ರಮಣೀಯೋತ್ಕಲಿಕಾ ಗ್ರಾಮ ಸಾಮೀಪ್ಯಂ ॥೧೭೨॥

ವಿಖ್ಯಾತ ಮಗಣದಲ್ಲೀ ಗ್ರಾಮೇಥ ವಿಶೇಷ ರೂಪೇಣ ।
ಶ್ರುತ್ವಾ ತಯೋಶ್ಚ ಪಾರ್ಶ್ವೇ ತಮಶೇಷಂ ಬಪ್ಪದೇವ ಗುರುಃ ॥೧೭೩॥

ಅಪನೀಯ ಮಹಾಬಂಧಂ ಷಟ್ ಖಂಡಾಚ್ಛೇಷ ಪಂಚಖಂಡೇ ತು ।
ವ್ಯಾಖ್ಯಾಪ್ರಜ್ಞಪ್ತಿಂ ಚ ಷಷ್ಠಂಖಂಡಂ ತತಃ ಸಂಕ್ಷಿಪ್ಯ ॥೧೭೪॥

ಷಣ್ಣಾಂಖಂಡಾನಾಮಿತಿ ನಿಷ್ಪನ್ನಾನಾಂ ತಥಾ ಕಷಾಯಾಖ್ಯ(ಸ್ಯ) ।
ಪ್ರಾಭೃತಕಸ್ಯ ಚ ಷಷ್ಠ ಸಹಸ್ರ ಗ್ರಂಥ ಪ್ರಮಾಣಯುತಾಂ ॥೧೭೫॥

ವ್ಯಲಿಖಿತ್ ಪ್ರಾಕೃತಾ ಭಾಷಾರೂಪಾಂ ಸಮ್ಯಕ್ ಪುರಾತನ ವ್ಯಾಖ್ಯಾಂ ।
ಅಷ್ಟಸಹಸ್ರಗ್ರಂಥಾಂ ವ್ಯಾಖ್ಯಾಂ ಪಂಚಾಧಿಕಾಂ ಮಹಾಬಂಧೇ ॥೧೭೬॥

ಪೂಜ್ಯಪಾದ ಚರಿತೆಯ ಕಥನದಲ್ಲಿ ಹಿಂದೆ ಹೇಳಿರುವಂತೆ ಪ್ರಸ್ತುತ ಪ್ರಸಂಗ ದಲ್ಲಿಯೂ ಲೋಪದೋಷಗಳೇರ್ಪಟ್ಟಿವೆ. ಇಷ್ಟಾದರೂ ಇದನ್ನು ಉಪಯೋಗಾರ್ಹವಾಗಿರುವ ಕೆಲವಂಶಗಳ ಪರಿಗಣನೆಯ ದೃಷ್ಟಿಯಿಂದ ಇಲ್ಲಿ ಹೇಳಲಾಗುವುದು.

(ಸಮಂತಭದ್ರ) ಅವರಿಂದ ಮುಂದೆ ರವಿನಂದಿ ಮುನಿಪನು ಹುಟ್ಟಿ (ಸಿದ್ಧಾಂತ ವನ್ನು) ಹೇಳಿದನು. ಉತ್ಕಲಿಕಾ ಗ್ರಾಮದ ಸಮೀಪದಲ್ಲಿ ಮಣುವಕವಲ್ಲಿ ಎಂಬ ಗ್ರಾಮರಂಜಿಸುವುದು, ಅಲ್ಲಿ ಬಾಷ್ಪಾಖ್ಯ (ಬಪ್ಪಾಖ್ಯ) ಮುನಿಯ ಸಮೀಪದಲ್ಲಿ ತಾಮಸವಿಲ್ಲದೆ ವ್ಯಾಖ್ಯಾಪ್ರಜ್ಞಪ್ತಿ ಎಂಬ ಹೆಸರಿನ ಖಂಡವನ್ನು ವಿರಚಿಸಿ ರವಿಯು ಸುಜ್ಞಾನ ದಿಂದ ಪಾಭೃತವನ್ನು ೬೦೦೦೫ ಗ್ರಂಥವನ್ನು ಮುಂಚೆ ಹೇಳಿದನು.

ಈ ಮೇಲೆ ಕಂಡುಬರುವಂತೆ ಪೂಜ್ಯವಾದ ಚರಿತೆಯ ಹೇಳಿಕೆ ಅಸ್ಪಷ್ಟವಿದೆಯೆಂಬುದು ಸ್ವಯಂಸ್ಪಷ್ಟವಿದೆ. ಇಷ್ಟು ಮಾತ್ರವಲ್ಲ, ಇದು ಶ್ರುತಾವತಾರದ ಹೇಳಿಕೆಯೊಡನೆ ಸಮನ್ವಿತವಾಗದಿರುವುದೂ ಗಮನಾರ್ಹವಾಗಿದೆ. ಇದೂ ಅಲ್ಲದೆ ಶ್ರುತಾವ ತಾರದ ಹೇಳಿಕೆಯಲ್ಲಿಯೂ ಸಂದಿಗ್ಧತೆ ಇರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಈ ಬಗ್ಗೆ ಪರ್ಯಾಲೋಚನೆ ಮಾಡಬೇಕಾದ ಅಗತ್ಯವಿದೆ.

'ಬಪ್ಪದೇವಗುರುವು ಷಟ್ಖಂಡದಿಂದ ಮಹಾಬಂಧವನ್ನು ತೆಗೆದು (ಅಪನೀಯ) ಉಳಿದ(ಪಂಚ)ಖಂಡದಲ್ಲಿಯಾದರೋ ವ್ಯಾಖ್ಯಾಪ್ರಜ್ಞಪ್ತಿಯನ್ನು ಮತ್ತು ಷಷ್ಠಖಂಡ ವನ್ನೂ ಅನಂತರ (ಅದರಿಂದ ?) ಸಂಕ್ಷೇಪಿಸಿ, ಈ ರೀತಿಯಾಗಿ ನಿಷ್ಪನ್ನವಾದ ಆರು ಖಂಡಗಳಿಗೆ ಹಾಗೂ ಕಷಾಯಾಖ್ಯಪ್ರಾಭೃತಕ್ಕೆ ಅರವತ್ತುಸಹಸ್ರ ಗ್ರಂಥ ಪ್ರಮಾಣದ ಪ್ರಾಕೃತಭಾಷಾರೂಪದ ಪುರಾತನ ವ್ಯಾಖ್ಯೆಯನ್ನು ಚೆನ್ನಾಗಿ ಬರೆದನು' ಎಂದು ಶ್ರುತಾವತಾರದಲ್ಲಿ ಹೇಳಿದೆ.[೮೩] ಆದರೆ ಷಟ್‌ಖಂಡಾಗಮ-ಧವಲಾ ಪ್ರಸ್ತಾವನಾಕಾರ ರಾದ ಮಾನ್ಯ ಹೀರಾಲಾಲ್‌ಜೈನ್‌ರವರು '(ಬಪ್ಪದೇವಗುರು)' ಅವರು ಅಧ್ಯಯನದ ಬಳಿಕ ಮಹಾಬಂಧವನ್ನು ಬಿಟ್ಟು ಉಳಿದ ಐದು ಖಂಡಗಳಿಗೆ 'ವ್ಯಾಖ್ಯಾಪ್ರಜ್ಞಪ್ತಿ' ಎಂಬ ಹೆಸರಿನ ಟೀಕೆ ಬರೆದರು. ಅದಾದ ಬಳಿಕ ಅವರು ಆರನೇ ಖಂಡಕ್ಕೆ ಸಂಕ್ಷೇಪವಾಗಿ ವ್ಯಾಖ್ಯಾನ ಬರೆದರು. ಈ ರೀತಿಯಿಂದ ಆರು ಖಂಡಗಳು ನಿಷ್ಪನ್ನವಾದ ಬಳಿಕ

ಕಷಾಯ ಪ್ರಾಭೃತಕ್ಕೂ ಟೀಕೆ ಬರೆದರು. ಈ ಹೇಳಿದ ಐದು ಖಂಡಗಳ ಮತ್ತು ಕ್ಷಾಯ ಪ್ರಾಭೃತದ ಟೀಕೆ ೬೦೦೦೦ ಗ್ರಂಥ ಪ್ರಮಾಣದ್ದಾಗಿದೆ. ಮಹಾಬಂಧದ ಟೀಕೆ ೮೦೦೫ ಗ್ರಂಥ ಪ್ರಮಾಣದ್ದಾಗಿದೆ ಮತ್ತು ಇದೆಲ್ಲದರ ಭಾಷೆ ಪ್ರಾಕೃತವಾಗಿದೆ'. ಈ ಅರ್ಥವು ಶ್ಲೋಕ ಗಳ ನೇರ ಅರ್ಥವಾಗಿರದೆ ಅಸಮಂಜಸವಾಗಿ ಕಂಡುಬಂದದ್ದನ್ನು ಸರಿಪಡಿಸಲು ಯತ್ನ ಮಾಡಿರುವಂತಹುದಾಗಿದೆ. 'ಷಟ್ ಖಂಡಾಗಮದಿಂದ ಆರನೇಖಂಡವನ್ನು ತೆಗೆದು ಉಳಿದ ಐದು ಖಂಡಗಳಿಗೆ ವ್ಯಾಖ್ಯಾಪ್ರಜ್ಞಪ್ತಿಯನ್ನು ಸಂಕ್ಷೆಪಿಸಿ ಸೇರಿಸಿ ಆ ಮೂಲಕ ನಿಸ್ಪನ್ನವಾದ ಆರುಖಂಡಗಳಿಗ್್ರ ಹಾಗೂ ಕಷಾಯಪ್ರಾಭೃತಕ್ಕೆ ೬೦೦೦೦ ಗ್ರಂಥ ಪ್ರಮಾಣದ ಟೀಕೆ ಬರೆಯಲಾಯಿತು'ಎಂಬುದು ನೇರವಾದ ಅರ್ಥವಾಗಿದೆ. 'ವ್ಯಾಖ್ಯಾನಪ್ರಜ್ಞ ಪ್ತಿಯು' ಒಂದು ಟೀಕೆಯಾಗಿದೆ ಎಂಬ ಸೂಚನೆ ಶ್ಲೋಕದಲ್ಲಿ ಸರ್ವಥಾ ಇಲ್ಲವಾಗಿದೆ. ಇಲ್ಲಿ ಪರಿಶೀಲನಾರ್ಹವಾದ ಒಂದು ಅಂಶವಿದೆ. 'ವ್ಯಾಖ್ಯಾಪ್ರಜ್ಞಪ್ತಿ' ಎಂಬುದು ಐದ ನೆಯ ಅಂಗದ ಹೆಸರು, ಇದಲ್ಲದೆ ದೃಷ್ಟಿವಾದಾಗಂದ ಮೊದಲನೆಯ ವಿಭಾಗ ಪರಿಕರ್ಮ, ಇದರ ಐದನೇ ವಿಭಾಗವು'ವ್ಯಾಖ್ಯಾಪ್ರಜ್ಞಪ್ತಿ'ಎಂಬ ಹೆಸರಿನದಾಗಿದೆ. ಇದೂ ಅಲ್ಲದೆ ತುಂಬುಲೂರಾಚಾರ್ಯರು 'ಆರುಸಾವಿರಗ್ರಂಥ ವ್ಯಾಖ್ಯಾಪ್ರಜ್ಞಪ್ತಿಯ ತೋರಿದ ಸರ್ವಬುಧರಿಗೆ' ಎಂದು ಪೂಜ್ಯಪಾದಚರಿತೆಯಲ್ಲಿ ಹೇಳಿದೆ. ಆದ್ದರಿಂದ ಬಪ್ಪದೇವಗುರುವು ಷಟ್ ಖಡಾಗಮದಿಂದ ಆರನೆಯದದ ಮಹಾಬನ್ಧ ವನ್ನು ಬೇರ್ಪಡಿಸಿ ಅದರ ಸ್ಥಾನದಲ್ಲಿ ಈ ಹೇಳಿದ 'ವ್ಯಾಖ್ಯಾಪ್ರಜ್ಞಪ್ತಿ'ಯನ್ನು ಸಂಕ್ಷೇಪಿಸಿ ಸೇರಿಸಿ, ಆ ರೀತಿಯಿಂದ ನಿಷ್ಪನ್ನವಾದ ಆರುಖಂಡಗಳಿಗೆ ಮತ್ತು ಕಷಾಯಪಾಹುಡಕ್ಕೆ ಒಟ್ಟಾಗಿ ೬೦೦೦೦ ಗ್ರಂಥ ಪ್ರಮಾಣದ ಟೀಕೆ ಬರೆದಿರಬಹುದೆ? ಎಂಬುದಾಗಿ ಚಿಂತನೆ ಮಾಡಲು ಅವಕಾಶವಿದೆ. ಆಗಮಗಳ ವ್ಯಾಖ್ಯಾನಕಾರರು ವ್ಯಾಖ್ಯಾನ ಮಾಡುವಲ್ಲಿ ತಮಗೆ ದೊರೆತಿದ್ದ ಅಂಗಶ್ರುತದ ಅವಶಿಷ್ಟಭಾಗಗಳ ಉಪಯೋಗ ಮಾಡಿಕೊಂಡಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಈ ರೀತಿಯಾಗಿ ಅಂಗಶ್ರುತದ ಅವಶಿಷ್ಟ ಭಾಗಗಳು ದೀರ್ಘಕಾಲದವರೆಗೆ ಉಳಿದು ಬಂದಿದ್ದುವೆಂದು ಹೇಳಲು ಸಾಕಷ್ಟು ಆಧಾರವಿದೆ.

ಅಕಲಂಕಸ್ವಾಮಿಯವರು (ತ. ಸೂತ್ರದ) ತಮ್ಮ ರಾಜವಾರ್ತಿಕ ಟೀಕೆಯಲ್ಲಿ೨/೯ ಷಟ್ ಖಂಡಾಗಮದ ಸೂತ್ರವನ್ನು ಉಲ್ಲೇಖಿಸಿ, ಇದರಲ್ಲಿ ಹೇಳಿರುವ 'ತಿರ್ಯಙ್ಮನು ಷ್ಯಾಣಾಂ' ಎಂಬುದು ಆರ್ಷವಿರೋಧ ಎಂಬ ಪ್ರಶ್ನೆಗೆ ಉತ್ತರವಾಗಿ 'ಅತ್ರ ಉಚ್ಯ್ಯತೆ–ನ ಅನ್ಯತ್ರೋಪದೇಶಾತ್' ಎಂದು

ಹೇಳಿದ್ದಾರೆ. ಇದಲ್ಲದೆ ಹೀಗೆಯೇ ಮತ್ತೊಮ್ಮೆಯೂ ಉಲ್ಲೇಖಿಸಿದ್ದಾರೆ. (ಆರ್ಷಯೋಸ್ತಯೀರ್ದ್ವಯೋಃ) ಈ ವ್ಯಾಖ್ಯಾಪ್ರಜ್ಞಪ್ತಿಯನ್ನು ಷಟ್ಖಂಡಾಗಮದಂತೆ 'ಆರ್ಷ'ವೆಂದೂ ಹೇಳಲಾಗಿದೆ. ಆದ್ದರಿಂದ ಅಕಲಂಕಸ್ವಾಮಿ ಯವರ ಸಂಮುಖದಲ್ಲಿ ಪೂರ್ಣ ವ್ಯಾಖ್ಯಾಪ್ರಜ್ಞಪ್ತಿಯಲ್ಲವಾದರೂ ಅದರ ಅವಶಿಷ್ಟ ಭಾಗವಾದರೂ ಇದ್ದಿತೆಂದು ಪ್ರಮಾಣೀಕೃತಗುವುದು. ಆದ್ದರಿಂದ ಸ್ಥೂಲರೀತಿಯಿಂದ ಅಕಲಂಕಸ್ವಾಮಿಯವರ ಸಮಕಾಲೀನರೆಂದು ಹೇಳಬಹುದಾದ ಬಪ್ಪದೇವ ಗುರುವಿಗೆ ಐದನೇ ಅಂಗ ವ್ಯಾಖ್ಯಾಪ್ರಜ್ಞಪ್ತಿಯ ಅವಶಿಷ್ಟಭಾಗ ಅಥವಾ ಪರಿಕರ್ಮದ ಐದನೇ ವಿಭಾಗ ವ್ಯಾಖ್ಯಾಪ್ರಜ್ಞಪ್ತಿಯು ಉಪಲಬ್ಧವಿದ್ದಿತೆಂದು ತಿಳಿಯಬಹುದಾಗಿದೆ. ಆದ್ದರಿಂದ ತಮಗೆ ತಿಳಿದಿದ್ದ ವ್ಯಾಖ್ಯಾಪ್ರಜ್ಞಪ್ತಿಯನ್ನು ಸಂಗ್ರಹಿಸಿ ಷಟ್ಖಂಡಾಗಮ ದಿಂದ ಬೇರ್ಪಡಿಸಲಾದ ಆರನೇ ಖಂಡದ ಸ್ಥಾನದಲ್ಲಿರಿಸಿ ಅನಂತರ ಆರೀತಿ ನಿಷ್ಪನ್ನ ವಾದ ಅರೂ ಖಂಡಗಳಿಗೆ ಮತ್ತು ಕಷಾಯಪ್ರಾಭೃತಕ್ಕೆ ವ್ಯಾಖ್ಯಾನ ಮಾಡಿರುವರೆಂದು ಮತ್ತು ಬೇರ್ಪಡಿಸಲಾದ ಆರನೇ ಖಂಡ–ಮಹಾ ಬಂಧಕ್ಕೆ ಪ್ರತ್ಯೇಕವಾದ ವ್ಯಾಖ್ಯಾನ ಮಾಡಿರುವರೆಂದೂ ತಿಳಿಯಬಹುದಾಗಿದೆ. ಇಲ್ಲಿ ಈ ರೀತಿಯದಾದ ಸಂಭಾವ್ಯತೆ ಯನ್ನು ಹೇಳಲಾಗಿದೆಯಾದರೂ ಈ ಸಂಗತಿಯು ಯುಕ್ತ ಆಧಾರಗಳಿಂದ ಪುನಃ ಪರಿಶಿಲನಾರ್ಹವಗಿದೆಯೆಂದು ಹೇಳಬೇಕಾಗಿದೆ.

ಪ್ರಕೃತ ಸಂದರ್ಭದಲ್ಲಿ ವ್ಯಾಖ್ಯಾಪ್ರಜ್ಞಪ್ತಿಯು ಬಗ್ಗೆ ಮಾನ್ಯ ಹೀರಾಲಾಲ್ ಜೈನ್ ಅವರು ಹೇಳಿರುವ ಮುಂದಿನ ಸಂಗತಿಗಳು ಅವಧಾರಣಾರ್ಹವಾಗಿವೆ.[೮೫]

ಧವಲಾದಲ್ಲಿ ವ್ಯಾಖ್ಯಾಪ್ರಜ್ಞಪ್ತಿಯ ಉಲ್ಲೇಖಗಳು ನಮ್ಮ ದೃಷ್ಟಿಗೋಚರವಾಗಿವೆ. ಒಂದೆಡೆಯಲ್ಲಿ ಅದರ ಅವತರಣ ಪೂರ್ವಕ (ಧವಲಾ) ಟೀಕಾಕಾರರು ಮುಂದಿನಂತೆ ತಮ್ಮ ಅಭಿಮತವನ್ನು ಪುಷ್ಟೀಕರಿಸಿಕೊಂಡಿದ್ದಾರೆ.

'ಲೋಗೋ ವಾದ ಪದಿಟ್ಠಿದೊತ್ತಿ ವಿಯಾಹಪಣ್ಣತ್ತಿ ವಯಣಾದೋ'(ಧ.೨೪೩)

ಮತ್ತೊಂದೆಡೆ ತಮ್ಮ ಮತಕ್ಕೆ ವಿರೋಧವನ್ನು ಮುಂದಿನಂತೆ ಕಾಣಿಸಿದ್ದಾರೆ.

'ಏದೇಣ ವಿಯಾಹಪಣ್ಣತ್ತಿ ಸುತ್ತೀಣ ಸಹ ಕಥಂ ವಿರೋಹೋ ? ಣ, ಏದಮ್ಹಾ ದೋ ತಸ್ಸ ಪುಧಸುದಸ್ಸ ಆಯಾರಿಯಭೇಏಣ, ಭೇಧಮಾವಣ್ಣಸ್ಸ ಏಯಾತ್ತಾಭಾ ವಾದೋ' (ಧ ೮೦೮)

ಈ ರೀತಿಯದಾದ ಸ್ಪಷ್ಟಮತಭೇಧದಿಂದ ಹಾಗೂ ಅದನ್ನು ಸೂತ್ರ ಎಂದು ಹೇಳಿರುವುದರಿಂದ ಈ ವ್ಯಾಖ್ಯಾಪ್ರಜ್ಞಪ್ತಿಯನ್ನು ಈ ಸಿದ್ಧಾಂತ ಗ್ರಂಥಗಳ ಟೀಕೆಯೆಂದು ಮಾನ್ಯ ಮಾಡಲು ಆಶಂಕೆ ಉತ್ಪನ್ನವಾಗುವುದು. ಆದರೆ (ಕ.ಪಾ.ಟೀಕೆ) ಜಯಧವಲಾದಲ್ಲಿ ಒಂದೆಡೆ ಟೀಕಾಕಾರರು ಬಪ್ಪದೇವರನ್ನು ಹೆಸರಿಸಿ, ಅವರ ಮತ್ತು ತಮ್ಮ ಮತ ಭೇಧವನ್ನು ಮುಂದಿನಂತೆ ಕಾಣಿಸಿದ್ದಾರೆ.

'ಚುಣ್ಣಿಸುತ್ತಮ್ಮಿ ಬಪ್ಪದೇವಾಇರಿಯ ಲಿಹಿದುಚ್ಚಾರಣಾಏ ಅಂತೋ ಮಹತ್ತ ಮಿದಿ ಭಣಿದೋ, ಅಮ್ಹೇಹಿ ಲಿಹಿದುಚ್ಚಾರಣಾಏ ಪುಣ ಜಹ, ಏಗ ಸಮಓ, ಉಕ್ಕ ಸಂಖೆಜ್ಜಾ ಸಮಯಾ ತ್ತಿ. ಪರೂವಿದೋ' (ಜ. ಧ. ೧೪೮)

ಈ ಅವತರಣಗಳಿಂದ ಬಪ್ಪದೇವರ ಮತ್ತು ಅವರ ಟೀಕೆ 'ವ್ಯಾಖ್ಯಾಪ್ರಜ್ಞಪ್ತಿ'ಯ ಅಸ್ತಿತ್ವವು ಸಿದ್ಧವಾಗುವುದು. ಧವಲಾಕಾರ ವೀರಸೇನಾಚಾರ್ಯರು ಇಂದ್ರ ನಂದಿಯವರ ಕಥನಾನುಸಾರ, ಬಪ್ಪದೇವರು ವ್ಯಾಖ್ಯಾಪ್ರಜ್ಞಪ್ತಿಯನ್ನು ಪಡೆದೇ ತಮ್ಮ ಟೀಕೆಯನ್ನು ಪ್ರಾರಂಭಿಸಿರುವರೆಂದು ಹೇಳಿದ್ದೇವೆ."

ಪುನಃ ಇದೇ ವಿಷಯವಾಗಿ ಕಸಾಯಪಾಹುಡ ಪ್ರಸ್ತಾವನಾಕಾರರು ಹೇಳಿರುವ (ಪು.೧೧) ಸಂಗತಿಯನ್ನೂ ಗಮನಕ್ಕೆ ತಂದುಕೊಳ್ಳಬೇಕಾಗಿದೆ.

ಸ್ಥಿತಿ ವಿಭಕ್ತಿ ಅಧಿಕಾರದಲ್ಲಿಯೇ ಕಾಲಾನುಗಮದ ವರ್ಣನೆ ಮಾಡುತ್ತಾ ಒಂದೆಡೆ ಯಲ್ಲಿ ಜಯಧವಲಾಕಾರರು ಬಪ್ಪದೇವಾಚಾರ್ಯವಿರಚಿತ 'ಉಚ್ಚಾರಣಾ'ದ ಉಲ್ಲೇಖ ಮಾಡಿದ್ದಾರೆ. ಇದು, ಸಂಭವನೀಯವಾಗಿ, ಇಂದ್ರನಂದಿಯವರು ತಮ್ಮ ಶ್ರುತಾವತಾರದಲ್ಲಿ ಉಲ್ಲೇಖ ಮಾಡಿರುವ ವೃತ್ತಿಯಾಗಿದೆ. ಆದರೆ ಅವರು ಅದರ ಹೆಸರನ್ನು 'ವ್ಯಾಖ್ಯಾಪ್ರಜ್ಞಪ್ತಿ' ಎಂದು ಕಾಣಿಸಿದ್ದಾರೆ ಮತ್ತು ಈ ವ್ಯಾಖ್ಯಾಪ್ರಜ್ಞಪ್ತಿಯ ಉಲ್ಲೇಖವು ಧವಲಾದಲ್ಲಿದೆ. ಒಂದು ವೇಳೆ ಧವಲಾದಲ್ಲಿ ಉಲ್ಲೀಖಿತವಿರುವ ವ್ಯಾಖ್ಯಾಪ್ರಜ್ಞಪ್ತಿಯ ಕರ್ತೃ ಬಪ್ಪದೇವರೇ ಆಗಿರುವರೆಂದಾದಲ್ಲಿ, ಇವರು ಷಟ್ ಖಂಡಾಗಮದ ಮೇಲೆ ರಚಿಸಿದ ಟೀಕೆಯ ಹೆಸರು 'ವ್ಯಾಖ್ಯಾಪ್ರಜ್ಞಪ್ತಿ' ಎಂದೂ ಮತ್ತು ಕಸಾಯಪ್ರಾಭೃತದ ಮೇಲೆ ರಚಿಸಿದ ಟೀಕೆಯ ಹೆಸರು 'ಉಚ್ಚಾರಣಾ' ಎನ್ನಾಗಿದೆ ಯೆಂದು ಗ್ರಹಿಸಬೇಕಾಗುವುದು ; ಏಕೆಂದರೆ

ವ್ಯಾಖ್ಯಾಪ್ರಜ್ಞಪ್ತಿಯ ಉಲ್ಲೇಖ ಧವಲಾ ದಲ್ಲಿದೆ ಮತ್ತು ಉಚ್ಚಾರಣಾದ ಉಲ್ಲೇಖ (ಕ.ಪಾ.) ಜಯಧವಲಾದಲ್ಲಿದೆ."

ಮಾನ್ಯ ಹೀರಾಲಾಲ್‌ಜೈನ್ ಅವರು ಮೊದಲಿಗೆ ಧವಲಾದಲ್ಲಿ ಉಲ್ಲಿಖಿತವಾಗಿರುವ ಉಕ್ತಿಗಳು ಬಪ್ಪದೇವರ ವ್ಯಾಖ್ಯಾನದ್ದಾಗಿರುವ ಬಗ್ಗೆ ಆಶಂಕೆ ವ್ಯಕ್ತಪಡಿಸಿ (ಸೂತ್ರ) ಆಗಮದ್ದಾಗಿರಬಹುದೆಂಬ ಅಭಿಪ್ರಾಯಪಟ್ಟು ಅನಂತರ ಜಯಧವಲಾ ಉಕ್ತಿಯನ್ನು ಉಲ್ಲೇಖಿಸಿ 'ಬಪ್ಪದೇವ ಮತ್ತು ಅವರ ಟೀಕೆ ವ್ಯಾಖ್ಯಾಪ್ರಜ್ಞಪ್ತಿಯ ಆಸ್ತಿತ್ವವು ಸಿದ್ಧವಾಗುವುದು' ಎಂದಿದ್ದಾರೆ. ಆದರೆ ಜಯಧವಲಾ ಟೀಕೆಯಲ್ಲಿ ಬಪ್ಪದೇವರ ಟೀಕೆಯನ್ನು 'ಉಚ್ಚಾರಣಾ' ಎಂದು ಹೆಸರಿಸಿದ್ದಾರೆಯಲ್ಲದೆ 'ವ್ಯಾಖ್ಯಾಪ್ರಜ್ಞಪ್ತಿ' ಎಂದಲ್ಲ ಎಂಬುದನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಇದೇ ಸಂಗತಿಯ ಬಗ್ಗೆ ಕ. ಪಾ ಪ್ರಸ್ತಾವನಾಕಾರರು, ಬಪ್ಪದೇವಗುರುವಿನ ವ್ಯಾಖ್ಯಾಪ್ರಜ್ಞಪ್ತಿ ಟೀಕೆಯ ಬಗ್ಗೆ ನಿಶ್ಚಿತ ರೀತಿಯ ಅಭಿಪ್ರಾಯ ವ್ಯಕ್ತಪಡಿಸದೆ ಕೇವಲ ಸಂಭವನೀಯತೆಯನ್ನು ಮಾತ್ರ ಹೇಳಿಇವೇಇಂದ ಕಷಾಯಪಾಹುಡದ ಮೇಲೆ ರಚಿತವಾದ ಟೀಕೆಯ ಹೆಸರು 'ಉಚ್ಚಾರಣಾ' ಎಂಬ ಹೆಸರಿನದಾಗಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಬಪ್ಪದೇವಗುರುವು ಕಷಾಯಪಾಹುಡಕ್ಕೆ ಮಾಥ್ರ ಪ್ರತ್ಯೇಕವಾಗಿ ಟೀಕೆ ಬರೆದರೆಂದು ಹೇಳಿಯೇ ಇಲ್ಲ. ಮಹಾಬಂಧದ ಸ್ಥಾನದಲ್ಲಿ ವ್ಯಾಖ್ಯಾಪ್ರಜ್ಞಪ್ತಿಯನ್ನು ಇರಿಸಿದ ಅನಂತರ ನಿಷ್ಪನ್ನವಾದ ಷಟ್ ಖಂಡಾಗಮ ಮತ್ತು ಕಸಾಯಪಾಹುಡಗಳೆರಡಕ್ಕೂ ಒಟ್ಟಿಗೆ ಟೀಕೆ ಬರೆದಂತೆ ಹೇಳಿದ್ದಾರೆ. ಆದ್ದರಿಂದ ಈ ಒಟ್ಟಿನ ಟೀಕೆಗೇ 'ಉಚ್ಚಾರಣಾ' ಎಂಬ ಹೆಸರಿದ್ದು ಅದನ್ನು ಆ ಹೆಸರಿನಿಂದ ಜಯಧವಲಾದಲ್ಲಿ ಉಲ್ಲೇಖಿಸಲಾಗಿದೆಯೆಂದು ತಿಳಿಯ ಹುದಾಗಿದೆ. ಇದರಂತೆ ಬಪ್ಪದೇವಗುರುವು ಷಟ್ ಖಂಡಾಗಮದ ಆರನೇ ಖಂಡವನ್ನು ತೆಗೆದು ಅದರ ಸ್ಥಾನದಲ್ಲಿ ಸಂಯೋಜಿಸಿದ ವ್ಯಾಖ್ಯಾಪ್ರಜ್ಞಪ್ತಿಯು, ಹಿಂದೆ ಹೇಳಿರುವಂತೆ ಐದನೆಯ ಅಂಗ ವ್ಯಾಖ್ಯಾಪ್ರಜ್ಞಪ್ತಿ ಇಲ್ಲವೆ ದೃಷ್ಟಿವಾದಾಂಗದ ಮೊದಲ ವಿಭಾಗ ಪರಿಕರ್ಮದ ಐದನೇವಿಭಾಗ ವ್ಯಾಖ್ಯಾಪ್ರಜ್ಞಪ್ತಿಯ ಸಂಗ್ರಹವಾಗಿರಬೇಕೆಂದು ಪುನಃ ಪ್ರತಿಪಾದಿತವಾಗುವುದು.

ಪೂಜ್ಯಪಾದಚರಿತೆಯ ಹೇಳಿಕೆಯಲ್ಲಿ ಲೋಪದೋಷಗಳೇರ್ಪಟ್ಟಿವೆಯೆಂದು ಹೇಳಲವಕಾಶವಿದೆ. ಇದರಲ್ಲಿ, 'ರವಿನಂದಿಮುನಿಪನೇ ಬಾಷ್ಪಾಖ್ಯ (ಬಪ್ಪಾಖ್ಯ) ಮುನಿ ಸಮೀಪದಲ್ಲಿ ವ್ಯಾಖ್ಯಾಪ್ರಜ್ಞಪ್ತಿ ಎಂಬ ಹೆಸರಿನ ಖಂಡವನ್ನು ವಿರಚಿಸಿದನು' ಎಂದು ಹೇಳಿದೆ. ಜಯಧವಲಾದಲ್ಲಿ, ಹಿಂದೆ ಹೇಳಿರುವಂತೆ, ಬಪ್ಪದೇವ ಗುರುವಿನ ಹೆಸರಿದೆಯಲ್ಲದೆ ರವಿನಂದಿಯು ಹೆಸರಿಲ್ಲ. ಆದ್ದರಿಂದ ಪ್ರಸ್ತುತ ಪ್ರಸಂಗದಲ್ಲಿ ಪೂಜ್ಯಪಾದ ಚರಿತೆಯಲ್ಲಿ ಬಪ್ಪದೇವಗುರುವಿನ ಬದಲಾಗಿ ರವಿನಂದಿ ಹೆಸರನ್ನು ಹೇಳಿರುವುದರಲ್ಲಿ ದೋಷವೇರ್ಪಟ್ಟಿದೆಯೆಂದು ತಿಳಿಯಬೇಕಾಗುವುದು. ಆದರೆ ಇಲ್ಲಿ 'ವ್ಯಾಖ್ಯಾಪ್ರಜ್ಞಪ್ತಿ'ಯನ್ನು ಟೀಕೆ ಎಂದು ಹೇಳಿರದೆ 'ಖಂಡ' ಎಂದು ಹೇಳಿರುವುದು ಗಮನಾರ್ಹವಾಗಿದ್ದು ಇದು ಈ ಹಿಂದೆ ಮಾಡಲಾಗಿರುವ ಪ್ರತಿಪಾದನೆಯನ್ನು ಸಮರ್ಥನೆ ಮಾಡುತ್ತದೆ.

ಬಪ್ಪದೇವಗುರುವು ಸಿದ್ಧಾಂತದ ಅಧ್ಯಯನ ಮತ್ತು ಟೀಕೆಯನ್ನು ರಚಿಸಿದ ಸ್ಥಳದ ಬಗ್ಗೆ ಪೂ. ಪಾ. ಚರಿತೆ ಮತ್ತು ಶ್ರುತಾವತಾರಗಳೆರಡಲ್ಲಿಯೂ ಸ್ಥೂಲವಾಗಿ ಒಂದೇ ಅಭಿಮತವಿದೆ. ಈ ಸ್ಥಳ, ವಿಖ್ಯಾತ ಮಗಣವಲ್ಲಿ ಗ್ರಾಮ, ಅಥವಾ ಮುಣುವಕಲ್ಲಿ ಗ್ರಾಮ, ಅಥವಾ ಮುಣುವಕವಲ್ಲಿ, ಇದು ರಮಣೀಯವಾದ ಉತ್ಕಲಿಕಾಗ್ರಾಮದ ಬಳಿಯಲ್ಲಿ ಭೀಮರಥಿ ಮತ್ತು ಕೃಷಮೇಖ ನದಿಗಳ ಮಧ್ಯ ದೇಶದಲ್ಲಿದೆ. ಈ ನ್ದಿಗಳು ಬೆಳಗಾಂ ಜಿಲ್ಲೆಯಲ್ಲಿವೆಯಾಗಿ ಉತ್ಕಲಿಕಾಗ್ರಾಮ ಮತ್ತು ಮುಣುವಕಲ್ಲಿಗಳು ಇದ್ದ ಪ್ರದೇಶವನ್ನು ಗುರುತಿಸಲೆತ್ನಿಸಬೇಕಾಗಿದೆ.

ಬಪ್ಪದೇವಗುರುವಿನ ಕಾಲನಿರ್ಣಯ ಸ್ವಲ್ಪ ತೊಡಕಿನದಾಗಿಯೇ ಇದೆ. ಶ್ರುತಾವತಾರದಕಥನದಂತೆ ಇವರು ಸ್ವಾಮಿ ಸಮಂತಭದ್ರ ಮತ್ತು ವೀರಸೇನರ ಮಧ್ಯವರ್ತಿಯಾದ ವ್ಯಾಖ್ಯಾನಕಾರರಾಗಿದ್ದಾರೆ. ಆದ್ದರಿಂದ ಇವರ ಜೀವಿತಕಾಲ ಗರಿಷ್ಠ ಮಿತಿ ಯನ್ನು ವಿ. ಶಕೆ ಆರನೇ ಶತಮಾನದ ಅಂತ್ಯಸಮಯವೆಂದು ಗಣನೆ ಮಾಡಬೇಕಾಗುವುದು. ಹೀಗೆಯೇ ಇವರ ಕಾಲದ ಕನಿಷ್ಠಮಿತಿಯನ್ನು ವಿ. ಶಕೆ ಒಂಭತ್ತನೇ ಶತಮಾನವೆಂದು ಗಣನೆ ಮಾಡಬಹುದು. ಇವರ ನಿರ್ದಿಷ್ಠಕಾಲದ ಬಗ್ಗೆ 'ವೀರನಿರ್ವಾಣದಿಂದ ೧೩೦೦ ವರ್ಷಗಳ ತರುವಾಯದಲ್ಲಿ ಬಪ್ಪಭಟ್ಟ ಸೂರಿ

ಆದರು’ ಎಂಬ ಹೇಳಿಕೆಯಿದೆ.[೮೬] ಇದರ ಪ್ರಕಾರ (೧೩೦೦–೪೭೦) ವಿಕ್ರಮ ಸಂವತ್ ೮೩೦ರ ಅನಂತರ ದಲ್ಲಿದ್ದರೆಂದು ಸೂಚಿತವಾಗುವುದು.

ಇದುವರೆಗೆ ಪ್ರಸ್ತಾವಿಸಲಾದ ಟೀಕೆಗಳು ಈಗ ದೊರಕದಿರುವ ಬಗ್ಗೆ ಮಾನ್ಯ ಹೀರಾಲಾಲ್ ಜೈನ್ ಅವರು ಹೇಳಿರುವ ಈ ಮುಂದಿನ ಹೇಳಿಕೆ ಅವಧಾರಣಾರ್ಹವಾಗಿದೆ : "ಈ ಟೀಕೆಗಳೆಲ್ಲವೂ ಎಲ್ಲಿ ಹೋದವು, ಮತ್ತು ಅವುಗಳ ಪಠನ–ಪಾಠನ ರೂಪದ ಪ್ರಚಾರ ಏಕೆ ತುಂಡಾಯಿತು ? ಎಂಬ ಪ್ರಶ್ನೆಗೆ ಅವಕಾಶವಾಗಿದೆ. ಧವಲಾಕಾರ ವೀರಸೇನರ ಮತ್ತು ಅವರ ಶಿಷ್ಯ ಜಿನಸೇನರ ಹೇಳಿಕೆಯಂತೆ, ಚಿರಕಾಲದ ಪುಸ್ತಕಗಳ ಗೌರವವನ್ನು ಅವರು ಬೆಳೆಸಿದರು ಮತ್ತು ಈ ಕಾರ್ಯದಲ್ಲಿ ಅವುಗಳು ತಮ್ಮಿಂದ ಪೂರ್ವದ ಸಮಸ್ತ ಪುಸ್ತಕ–ಶಿಷ್ಯರಿಂದ ಹೆಚ್ಚು ಬೆಳೆದು ಹೋದವು. ಈ ಟೀಕೆಯ ಪ್ರಭಾವದಿಂದಾಗಿ ಮೇಲೆ ಹೇಳಿದ ಎಲ್ಲ ಪ್ರಾಚೀನ ಟೀಕೆಗಳ ಪ್ರಚಾರಕ್ಕೆ ತಡೆಯುಂಟಾ ಯಿತೆಂದು ಕಂಡು ಬರುತ್ತದೆ. ವೀರಸೇನಾಚಾರ್ಯರು ತಮ್ಮ ಟೀಕೆಯ ವಿಸ್ತಾರ, ಅಥವಾ ವಿಷಯದ ಪೂರ್ಣ ಪರಿಚಯ, ಹಾಗೂ ಪೂರ್ವ ಮಾನ್ಯತೆಗಳ ಮತ್ತು ಮತ ಭೇದಗಳ ಸಂಗ್ರಹ, ಆಲೋಚನೆ ಮತ್ತು ‘ಮಂಥನಗಳ ಮುಖೇನ ಆ ಹಿಂದಿನಕಾಲದ ಟೀಕೆಗಳನ್ನು ಪಾಠಕರ ದೃಷ್ಟಿಗೆ ಮರೆಗೊಳ್ಳುವಂತೆ ಮಾಡಿದ್ದಾರೆ. ಆದರೆ ಸ್ವತಃ ಈ ವೀರಸೇನರ ಟೀಕೆಯೂ ಕೂಡ ಅದೇ ರೀತಿಯದಾದ ಕತ್ತಲೆಯಲ್ಲಿ ಬೀಳುವಂತಹ ಪರಿಸ್ಥಿತಿಯಿಂದ ತನ್ನನ್ನು ರಕ್ಷಿಸಿಕೊಳ್ಳದಾಯಿತು. ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಯವರು ಈ ಟೀಕೆಯ ಸಾರವನ್ನು ಪೂರ್ಣವಾಗಿ ತೆಗೆದುಕೊಂಡು ಸಂಕ್ಷೇಪವಾಗಿ ಸರಳವಾಗಿ ಮತ್ತು ಸುಸ್ಪಷ್ಟವಾಗಿ ಗೊಮ್ಮಟಸಾರದ ರಚನೆ ಮಾಡಿದರು. ಇದರಿಂದಾಗಿ ಈ ಟೀಕೆಯ ಪಠನ–ಪಾಠನವೂ ಕೂಡ ನಿಂತು ಹೋಯಿತು. ಈ ಮಾತಿನ ಸತ್ಯವನ್ನು , ಕಳೆದ ಏಳು ಎಂಟು ಶತಮಾನಗಳಲ್ಲಿ ಈ ಟೀಕೆಯ ಉಪಯೋಗವಾಗಿಲ್ಲದಿರುವುದು ಮತ್ತು ಇದರ ಏಕಮಾತ್ರ ಪ್ರತಿಯು ಪೂಜಾ ವಸ್ತುವಾಗಿ ಸಂದೂಕದ ಬಂಧನದಲ್ಲಿ ಉಳಿದಿದ್ದಿತೆಂಬುದನ್ನು ಸಾಕ್ಷೀಕರಿಸುತ್ತದೆ. ಆದರೆ ಈಗಲೂ ಪೂರ್ವಕಾಲದ ಆ ಟೀಕೆಗಳು ದಕ್ಷಿಣದ ಯಾವುದಾದರೊಂದು ಶ್ರುತಭಂಡಾರದಲ್ಲಿ ಬಿದ್ದಿದ್ದು ಪ್ರಕಾಶನ ಮಾರ್ಗದ ಪ್ರತೀಕ್ಷೆ ಮಾಡುತ್ತಿದ್ದಲ್ಲಿ ಅದು ಅಸಂಭವವೇನಲ್ಲ. ದಕ್ಷಿಣದಲ್ಲಿ ಪುಸ್ತಕ ಗಳನ್ನು ತಾಡಪತ್ರದ ಮೇಲೆ

ಬರೆಯಲಾಗುತ್ತಿದ್ದಿತು. ತಾಡಪತ್ರಗಳು ಬೇಗನೆ ನಷ್ಟ ವಾಗುವುದಿಲ್ಲ. ಈ ದೃಷ್ಟಿಯಿಂದ ಸಾಹಿತ್ಯಪ್ರೇಮಿಗಳು ದಕ್ಷಿಣಪ್ರಾಂತದ ಭಂಡಾರ ಗಳಲ್ಲಿ ಹುಡುಕಾಡುತ್ತಿರಬೇಕಾಗಿದೆ.

ಈ ಹೇಳಿಕೆಯ ಬಗ್ಗೆ ಆಲೋಚನಾರ್ಹವಾದ ಒಂದು ಅಂಶವಿದೆ. ವೀರಸೇನಾ ಚಾರ್ಯರಿಗೆ ಬಪ್ಪದೇವಗುರುವಿನ ಟೀಕೆಯಲ್ಲದೆ ಅವರಿಂದ ಹಿಂದಿನಕಾಲದ ಟೀಕೆಯ ಗ್ರಂಥಗಳು ದೊರಕಿವೆ ಎಂದು ಹೇಳಲಾಗುವುದಿಲ್ಲ. ಹಾಗೆ ದೊರಕಿದ್ದಲ್ಲಿ, ಅವರ ಗ್ರಂಥಗಳು ಉಲ್ಲೇಖ ಮಾಡುವಲ್ಲಿ ಅವರುಗಳ ಹೆಸರುಗಳನ್ನು ಒಮ್ಮೊಮ್ಮೆಯಾದರೂ ಹೇಳದಿರುತ್ತಿರಲಿಲ್ಲ. ಇಂತಹ ಉಲ್ಲೇಖ ಮಾಡುವಲ್ಲಿ ಸಾಧಾರಣ 'ಉಕ್ತಂಚ (ಉತ್ತಂಚ), ಇದಿವಯಣಾದೋ ಎತ್ಥುವಲುಜ್ಜಂತೀಓ ಗಾಹಾಓ, ಇತ್ಯಾರ್ಷಾತ್, ಇದಿ ಆರಿಸವಯಣಾದೋ' ಎಂದು ಮುಂತಾಗಿ ಹೇಳಿದ್ದಾರೆ. ಆದರೆ ಕೆಲವೆಡೆ ತಮಗೆ ಸ್ಪಷ್ಟವಾಗಿ ತಿಳಿದಿದ್ದ ಗ್ರಂಥಗಳ ಹಾಗೂ ಆಚಾರ್ಯರ ಹೆಸರುಗಳನ್ನು ಹೇಳಿದ್ದಾರೆ. ಆದ್ದರಿಂದ ಕುಂದಕುಂದಾದಿ ಸಮಂತಭದ್ರಸ್ವಾಮಿಯವರ ವರೆಗಿನ ಸಿದ್ಧಾಂತ ವ್ಯಾಖ್ಯಾನ ಗ್ರಂಥಗಳು ಇವರಿಗೆ ದೊರೆತಿರಲಿಲ್ಲವೆಂದು ತಿಳಿಯಬೇಕಾಗುವುದು.

ಇಂದ್ರನಂದಿಯವರ ಶ್ರುತಾವತಾರದಲ್ಲಿ ಹೇಳಿರುವಂತೆ[೧೩] ಗುಣಧರರು ಕಷಾಯ ಪಾಹುಡವನ್ನು ನಾಗಹಸ್ತಿ ಮತ್ತು ಆರ್ಯಮಂಕ್ಷುಗಳಿಗೆ ವ್ಯಾಖ್ಯಾನ ಮಾಡಿ ತಿಳಿಸಿದರು. ಬಳಿಕ ಇವರಿಬ್ಬರ ಬಳಿ ಯತಿವೃಷಭರು ಆ ಸೂತ್ರಗಳ ಅಧ್ಯಯನ ಮಾಡಿ ಆ ಗಾಥೆ ಗಳಿಗೆ ವೃತ್ತಿಸೂತ್ರರೂಪದಿಂದ ೬೦೦೦ ಸಂಖ್ಯೆಯ ಗ್ರಂಥ ಪ್ರಮಾಣದ ಚೂರ್ಣಿ ಸೂತ್ರಗಳನ್ನು ರಚಿಸಿದರು. ಅನಂತರ ಅವರ ಬಳಿ ಉಚ್ಚಾರಣಾಚಾರ್ಯರು ಆ ಸೂತ್ರಗಳಿಗೆ ವೃತ್ತಿರೂಪದಿಂದ ೧೨,೦೦೦ 'ಉಚ್ಚಾರಣ' ಎಂಬ ಹೆಸರಿನ ಸೂತ್ರಗಳನ್ನು ರಚಿಸಿದರು. ಈ ರೀತಿಯಾಗಿ ಕಷಾಯಪ್ರಾಭೃತವು ಗುಣಧರ, ಯತಿವೃಷಭ ಮತ್ತು ಉಚ್ಚಾರಣಾಚಾರ್ಯರಿಂದ ಗಾಥೆ, ಚೂರ್ಣಿ ಮತ್ತು ಉಚ್ಚಾರಣ ಸೂತ್ರಗಳಿಂದ ವಿಶದವಾಗಿ ರಚಿತವಾಗಿ. ಈ ಪ್ರಕಾರದಿಂದ ದ್ರವ್ಯಭಾವ ರೂಪದಿಂದಪುಸ್ತಕಗತವಾದ ಎರಡೂ ವಿಧದ ಸಿದ್ಧಾಂತ ಆಗಮವು ಗುರು ಪರಿಪಾಟಿಯಿಂದ ಕುಂದಕುಂದಪುರದಲ್ಲಿ ಪದ್ಮ ನಂದಿಯವರಿಗೆ ಲಬ್ಧವಾಯಿತು.[೧೩]

ಕಷಾಯಪಾಹುಡದ ಈ ಮೇಲಿನ ಗುರುಶಿಷ್ಯ ಪರಿಪಾಟಿಯ ಸಂಗತಿಯಿಂದ ಸ್ಥೂಲವಾಗಿ ಗುಣಧರಸ್ವಾಮಿಯವರ ಜೀವಿತಕಾಲದ ಕೆಳಮಿತಿಯನ್ನು ನಿರ್ಣಯಿಸಬಹುದಾಗಿದೆ. ಸುವಿಖ್ಯಾತರಾದ ಕುಂದಕುಂದಾಚಾರ್ಯರಿಗೆ ಪದ್ಮನಂದಿ ಎಂಬುದು ಅವರ ನಂದಿಸಂಘ ಅನ್ವಯ ಸೂಚಿಯಾದ ಮುನಿಪರ್ಯಾಯದ ಹೆಸರಾಗಿದೆಯೆಂಬುದು ತಿಳಿದ ಸಂಗತಿಯಾಗಿದೆ. ಆದ್ದರಿಂದ ಮೇಲೆ ಹೇಳಿರುವ 'ಕುಂದಕುಂದ ಪುರದಲ್ಲಿ ಪದ್ಮನಂದಿಯವರಿಗೆ' ಎಂಬ ಹೇಳಿಕೆಯು ಕುಂದಕುಂದಾಚಾರ್ಯರನ್ನು ಸೂಚಿಸುವು ದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಆಚಾರ್ಯರು ಮ. ವೀ.ನಿ.ಸಂ. ೬೩೧–೬೩೨ ರಲ್ಲಿ ತಮ್ಮ ೧೧ನೇ ವಯಸ್ಸಿನಲ್ಲಿ ಮುನಿದೀಕ್ಷೆ ಪಡೆದು ಮ. ವೀ. ನಿ. ೭೦೬–೭ರವರೆಗೆ ಜೀವಿಸಿದ್ದರೆಂದು ಹಿಂದೆ ಸ್ಪಷ್ಟಪಡಿಸಿದೆ. ಷಟ್ಖಂಡಾಗಮ ಮತ್ತು ಚೂರ್ಣಿಸೂತ್ರ ಹಾಗೂ ಉಚ್ಚಾರಣಾವೃತ್ತಿಸೂತ್ರ ಸಹಿತವಾದ ಕಷಾಯಪಾಹುಡ_ ಈ ಎರಡೂ ಆಗಮಗಳು ಕುಂದಕುಂದಾಚಾರ್ಯರಿಗೆ ಲಬ್ಧವಾದುದೆಂಬ ಮೇಲೆ ಹೇಳಿದ ಐತಿಹ್ಯದನುಗುಣವಾಗಿ ಕುಂದಕುಂದಾಚಾರ್ಯರು ಗುಣಧರರಾದಿಯಾಗಿ ಉಚ್ಚಾರಣಾಚಾರ್ಯ ಪರ್ಯಾಂತರಾದ ಆಚಾರ್ಯರಿಂದ ಈಚಿನ ಕಾಲದವರೆಂದು ಸೂಚಿತವಾಗುವುದು. ಗುಣಧರರನ್ನು ಧರಸೇನರ ಹಿರಿಯ ಇಲ್ಲವೆ ಕಿರಿಯ ಸಮಕಾಲೀನರೆಂದು ತಿಳಿಯಬಹುದಾಗಿದೆ. ದೀರ್ಘಾಯುಷಿಯಾಗಿ ಜೀವಿಸಿದ್ದ ಕುಂದ ಕುಂದರು, ಗುಣಧರ, ನಾಗಹಸ್ತಿ, ಆರ್ಯಮಂಕ್ಷು, ಯತಿವೃಷಭರು ಮತ್ತು ಉಚ್ಚಾರಣಾಚಾರ್ಯರೆಲ್ಲರ ಕಿರಿಯ ಸಮಕಾಲೀನರಾಗಿದ್ದಲ್ಲಿ ಅದು ಅಸಂಭವವೆನಿಸುವುದಿಲ್ಲ. ಗುಣಧರರು ಮ. ವೀ. ನಿ. ಸಂ. ೬೮೦ರ ಹಿಂಚುಮುಂಚಿನಲ್ಲಿ ಕಷಾಯ ಪಾಹುಡದ ರಚನೆಯನ್ನು ಪೂರ್ಣಗೊಳಿಸಿ ಅದನ್ನು ನಾಗಹಸ್ತಿ ಮತ್ತು ಆರ್ಯಮಂಕ್ಷು

ಗಳಿಗೆ ಉಪದೇಶಿಸಿದ್ದಾರೆ. ಈ ಇಬ್ಬರ ಬಳಿ ಯತಿವೃಷಭರು ಕಷಾಯಪಾಹುಡದ ಅಧ್ಯಯನ ನಡೆಸಿ ಮ. ವೀ. ನಿ. ಸಂ. ೬೮೫–೬ ಸಮಯಕ್ಕೆ ಚೂರ್ಣಿಸೂತ್ರ ರಚನಾ ಪೂರ್ವರ ಉಚ್ಚಾರಣಾಚಾರ್ಯರಿಗೆ ಉಪದೇಶಿಸಿದ್ದಾರೆ. ಆನಂತರ ನಾಲ್ಕೈದು ವರ್ಷ ಗಳ ಕಾಲದವಧಿಯಲ್ಲಿ ಉಚ್ಚಾರಣಾಚಾರ್ಯರು ಉಚ್ಚಾರಣಾವೃತ್ತಿ ಸೂತ್ರವನ್ನು ರಚಿಸಿದ್ದಾರೆ ಈ ರೀತಿಯಿಂದ ಚೂರ್ಣಿವೃತ್ತಿಸೂತ್ರ ಮತ್ತು ಉಚಾರಣಾವೃತ್ತಿ ಸೂತ್ರಗಳನ್ನೊಳಗೊಂಡ ಕಷಾಯಪಾಹುಡವು, ಇದ್ರನಂದಿಯವರು

ಶ್ರುತಾವತಾರದಲ್ಲಿ ಹೇಳಿರುವಂತೆ, ಗುರುಪರಿಪಾಟಿಯಿಂದ ಕುಂದಕುಂದ–ಪದ್ಮ ನಂದಿಸ್ವಾಮಿಯವರಿಗೆ ಲಬ್ಧವಾಗಿದೆ.

### ಟಿಪ್ಪಣಿಗಳು

೧. ಏವಂ ದ್ವಿವಿಧೋ ದ್ರವ್ಯಭಾವಪುಸ್ತಕಗತಃ ಸಮಾಗಚ್ಛನ್ ।
ಗುರುಪಾಟ್ಯಾ ಜ್ಞಾತಃ ಸಿದ್ಧಾಂತಃ ಕುಂದಕುಂದಪುರೇ॥ ೧೬೦ ॥
ಶ್ರೀ ಪದ್ಮನಂದಿ ಮುನಿಪಾ ಸೋಪಿ ದ್ವಾದಸ ಸಹಸ್ರ ಪರಿಮಾಣಃ ।
ಗ್ರಂಥ ಪರಿಕರ್ಮಕರ್ತ್ರಾ (ರ್ತಾ?) ಷಟ್ ಖಂಡಾದ್ಯತ್ರಿಖಂಡಸ್ಯ॥ ೧೬೧ ॥

೨. (i) ಸಂಪಾದಕರು, ಹೀರಾಲಾಲ್ ಜೈನ್ ಅವರು ಅಮರಾವತೀ ಪ್ರಕಾಶನ ಕ್ರಿ. ಶ. ೧೯೩೯,ಪು. ಸಂ. ೪೬–೪೮ ಮತ್ತು (i i) ಸಂಪಾದಕರು, ಸ್ವರ್ಗೀಯ ಪಂ. ಫೂಲ್ ಚಂದ್ರ ಸಿದ್ಧಾಂತ ಶಾಸ್ತ್ರಿಯವರು–ಪ್ರಕಾಶನ, ಜೈನ ಸಂಸ್ಕೃತಿ ಸಂರಕ್ಷಕ ಸಂಘ, ಸೋಲಾಪುರ ಪು. ಸಂ. ೪೧,೪೨.

೩. 'ಎಲ್ಲಕ್ಕೂ ಮುಂಚಿತವಾಗಿ' ಎಂದೂ ಆಗಬಹುದು ಆದರೆ ಎಲ್ಲ ಟೀಕಾಕಾರಲ್ಲಿ ಮೊದಲಿಗೆ ರಾಗಿ ಎಂಬ ಅರ್ಥ ಸಾಧುವಾಗಿದೆ.

೪ ಮೇಲೆ ಹೇಳಿದ ಷಟ್ಖಂಡಾಗಮದ ಮುನ್ನುಡಿಯಲ್ಲಿ ಉಲ್ಲೇಖಿಸಿರುವ ಪರಿಕರ್ಮದ ಉಲ್ಲೇಖಗಳು–(೧)ತ್ತಿ ಪರಿಯಮ್ಮೇ ವುತ್ತಂ ಹೀಗೆಂದು ಪರಿಕರ್ಮದಲ್ಲಿ ಹೇಳಿದೆ (ಧವಲಾ ಅ೧೪೧,) (೨) ಪರಿಯಮ್ಮಮ್ಮಿ ವುತ್ತಂ ಪರಿಕರ್ಮದಲ್ಲಿ ಹೇಳಿದೆ, ಧ. (ಅ. ೬೭೮), (ಧ.ಅ. ೧೬೭), (೪) ಇದಿ ಪರಿಯಮ್ಮವಯಣಾದೋ, ಹೀಗೆ ಪರಿಕರ್ಮದ ವಚನದಿಂದ (ಧ. ಅ. ೨೦೩), (೫) ಣ ಚ ಪರಿಯನ್ನೇಣ ಸಹ ವಿರೋಹೋ ಪರಿಕರ್ಮದೊಡನೆ ವಿರೋಧವೇನಿಲ್ಲ. (ಧ.ಅ.೨೦೩), (೬) ಪರಿಯಮ್ಮಸುತ್ತೇಣ ಏದಃ ಸುತ್ತಂ ವಿರುಜ್ಝದಿತ್ತಿ ಣ–ಈ ಸುತ್ತವು ಪರಿಕರ್ಮಸೂತ್ರದೊಡನೆ ವಿರೋಧವುಳ್ಳದ್ದಾಗಿಲ್ಲ (ಧ. ಅ. ೩೦೪), (೭) ಪರಿಯ ಮ್ಮೇಣ ಏದಂ ವಕ್ಖಾಣಂ ಕಿಣ್ಣ ವಿರುಜ್ಝದೇ ? ಏದೇಣ ಸಹ ವಿರುಜ್ಝದೇ ಕಿಂತು ಸುತ್ತೇಣ ಸಹ ಣ ವಿರುಜ್ಝದೇ ತೇಣ ಏದಸ್ಸ ವಕ್ಖಾಣಸ್ಸಗಹಣಂ ಕಾಯವ್ವಂ, ಣ ಪರಿಯಮ್ಮಸ್ಸ, ತಸ್ಸ ಸುತ್ತ

ವಿರುಜ್ಝದೋ–ಪರಿಕರ್ಮಾದೊಡನೆ ಈ ವ್ಯಾಖ್ಯಾನವು ವಿರೋಧವುಳ್ಳದ್ದಾಗಿಲ್ಲವೇನು ? ಇದರೊಡನೆ (ಪರಿಕರ್ಮಾದೊಡನೆ) ವಿರೋಧವುಳ್ಳದ್ದಾಗಿದೆ. ಆದರೆ ಸುತ್ತದೊಡನೆ ವಿರೋಧ ಹೊಂದಿಲ್ಲ. ಆದ್ದರಿಂದ ಈ ವ್ಯಾಖ್ಯಾನವು (ಒಪ್ಪಿ) ಗ್ರಹಣ ಮಾಡಬೇಕು ಪರಿಕರ್ಮವನ್ನಲ್ಲ, ಅದಕ್ಕೆ ಸುತ್ತದೊಡನೆ ವಿರೋಧವಿರುವುದಾದ್ದರಿಂದ (ಧ. ಅ. ೨೫೯) (೮) ಪರಿಯಮ್ಮಾದೋ ಅ ಸಂಖೇ ಜ್ಜಾ ಓ ಜೋಯಣಕೋಡೀಓ ಸೇಢೀ ಏ ಪಮಾಣ ಮವಗದಮಿದಿ ಚೇ ಣ ಏದಸ್ಸ ಸುತ್ತಸ್ಸ ಬಲೇಣ ಪರಿಯಮ್ಮ ಪವುತ್ತೀ ದೋ (ಧ. ಅ. ಪು. ೧೮೬) ಸೇಡಿಯ ಅಸಂಖ್ಯಾತ ಯೋಜನ ಕೋಟಿಗಳ ಪ್ರಮಾಣವು ಪರಿಕರ್ಮದಿಂದ ತಿಳಿಯಲ್ಪಟ್ಟಿತಷ್ಟೆ ಎಂದಲ್ಲಿ ಇಲ್ಲ, ಸೂತ್ರದ ಬಲದಿಂದ ಪರಿಕರ್ಮಸೂತ್ರದ ಪ್ರವೃತ್ತಿಯಾಗಿರುವುದರಿಂದ (ಇಲ್ಲ), (೯) ಸಯಲಾಇರಿಯ ಸಮ್ಮದ ಪರಿಯಮ್ಮ ಸಿದ್ಧತ್ತಾದೋ–ಸಕಲ ಆಚಾರ್ಯರಿಗೆ ಸಮ್ಮತವಾದ ಪರಿಕರ್ಮದಿಂದ ಸಿದ್ಧವಾಗಿರುವುದರಿಂದ (ಧ. ಅ. ಪು. ೫೪೨).

೫ ಪ್ರಸ್ತುತ ಟೀಕೆಯನ್ನು ಕುರಿತು ದೇವಚಂದ್ರನ 'ಪೂಜ್ಯಪಾದಚರಿತೆ' (೨ನೇ ಸಂಧಿ)ಯಲ್ಲಿ–

ಮತ್ತಿತ್ತತಿಶಯ ಕುಂದಕುಂದಾಖ್ಯ ಪರುದೊಳು ಚಿತ್ರವಿಜಯತಾಪಸನೂ ।
ಪೇಳಲಳವೆ ಶ್ರೀ ಪದ್ಮ ನಂದ್ಯಾರ್ಯನು ಪೇಳಿದ ಪ್ರಾಕೃತದಿಂದಾ ॥

–ಎಂದುಹೇಳಿದೆ. ಇದರಿಂದ ಶ್ರುತಾವತಾರದಿಂದ ಬೇರೆಯದಾದ ಕೃತಿಯಾಧಾರ ದಿಂದ ಪೂಜ್ಯಪಾದಚರಿತಕಾರನು, ಕುಂದಕುಂದಾಚಾರ್ಯ ರಚಿತ ಟೀಕೆಯು 'ಪ್ರಾಕೃತ ಭಾಷೆಯದು' ಎಂದು ಹೇಳಿರುವನೆಂದು ಕಂಡು ಬರುತ್ತದೆ. ಇದಲ್ಲದೆ ಮುಂದೆಯೂ ಶ್ರುತಾವತಾರದೊಡನೆ ಸದೃಶತರವಾಗಿದ್ದೂ, ಭಿನ್ನತರವಾದ ಹೇಳಿಕೆಗಳು ಇದರಲ್ಲಿ ಕಂಡುಬರುವುವಾದ್ದರಿಂದ ಇದುಶ್ರುತಾವತಾರದಿಂದ ಬೇರೆಯದಾದ ಮೂಲಾಧಾರ ಹೊಂದಿದೆಯೆಂದು ತಿಳಿಯಬಹುದಾಗಿದೆ.

೬ 'ಸುತ್ತ' (ಸೂತ್ರ) ಎಂಬುದಕ್ಕೆ ಸಾಧಾರಣವಾಗಿ ಆಗಮ ಅಥವಾ ಆಗಮದ ವಾಕ್ಯ ಎಂಬ ಅರ್ಥವಿದೆ.

ಸುತ್ತಂ ಜಿಣೋವದಿಟ್ಠಂ ಪೊಗ್ಗಲದವ್ವಪ್ಪಗೇಹಿಂ ವಯಣೇಹಿಂ ।

ತಜ್ಜಾಣಣಾಹಿ ಣಾಣಂ ಸುತ್ತಸ್ಸ ಯ ಜಾಣಣಾ ಭಣಿಯಾ ॥ ೩೪ ॥

ಕುಂದಕುಂದಾಚಾರ್ಯರ ಪ್ರವಚನಸಾರ

ಆದರೆ ಸಂಸ್ಕೃತದ 'ಸೂತ್ರ' ಪದವು ಸ್ವಲ್ಪ ಅಕ್ಷರಗಳ್ಳುಳ್ಳದ್ದೂ, ಅಸಂದಿಗ್ಧವಾದುದೂ, ಸಾರವತ್ತಾದುದೂ ವಿಶ್ವತೋಮುಖವಾದುದೂ, ನಿರಂತರವಾದುದೂ, ದೋಷರಹಿತವಾದುದೂ ಆಗಿರುವಂತಹುದು ಎಂಬ ಲಕ್ಷಣ ಹೊಂದಿದೆ.

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋ ಮುಖಂ ।

ಅಸ್ತೋಭಮನವದ್ಯಂಚ ಸೂತ್ರಂ ಸೂತ್ರವಿದೋ ವಿದುಃ ॥

ಸಗ್ರಹವಾಗಿ ಹೇಳುವುದಾದರೆ, ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗುವ ಸಾರಭೂತ ಅರ್ಥಪೂರ್ಣವಾದ ತುಂಡುವಾಕ್ಯ 'ಸೂತ್ರ'ವೆನಿಸುವುದು. ಉದಾಹರಣೆ ತತ್ತ್ವಾರ್ಥಸೂತ್ರ.

೭ ಇಂಡಿಯನ್ ಆಂಟಿಕೆರಿ XX ಅಕ್ಟೋಬರ್ ೧೮೯೧ ರುಡೋಲ್ಫ್ ಹೊ ಎರ್ನಲ್ ಅವರ 'ದಿ ಪಟ್ಟಾವಲಿಸಿ ಆಫ್ ಸರಸ್ವತೀಗಚ್ಛ' ಇನ್ಟ್ರೊಡಕ್ಷನ್ ಆಫ್ ಪಟ್ಟಾವಲಿ '**A**'ಟೇಬಲ್.

೮ ಸನ್ಮಾನ್ಯ ಡಾ. ಎ. ಎನ್. ಉಪಾಧ್ಯೆಯವರ 'ಪ್ರವಚನ ಸಾರದ' ಮುನ್ನುಡಿ ಪು. ೧

೯ ಪೂ. ಸೂ. ಸತ್ಪ್ರರೂಪಣಾ, ಮುನ್ನಡಿ ಪು. ೫೯ ವಿದ್ಯಾನಂದ ಸ್ವಾಮಿಯವರೂ ಆಪ್ತ ಪರೀಕ್ಷೆಯಲ್ಲಿ ತತ್ತ್ವಾರ್ಥಸೂತ್ರ ಕರ್ತೃವನ್ನು ಗೃದ್ಧಪಿಂಛ ಎಂದು ಹೆಸರಿಸಿದ್ದಾರೆ.

೧೦ ಪೂ. ಸೂ. ಪ್ರ. ಸಾ ಮುನ್ನಡಿ, ಪು. ೧

೧೧ ಜೈನಿಜಂ ಇನ್ ಸೌತ್ ಇಂಡಿಯಾ ಅಂಡ್ ಜೈನ ಎಪಿಗ್ರಾಫ್ಸ್ ಪು. ೧೫೨–೧೫೭ ಕನ್ನಡ ಪದರೂಪದಲ್ಲಿದ್ದ 'ಕೊಂಡಕುಂದ'ವು ಈಗ ತೆಲಗು ಭಾಷಾರೂಪ ಹೊಂದಿ ಕೊನಕುಂಡಲ ಎಂಬ ರೂಪಹೊಂದಿದೆ, ಇದು ಒಂದು ಹಳ್ಳಿಯಾಗಿದ್ದು, ಅನಂತಪುರ ಜಿಲ್ಲೆ, ಗೂಟಿ ತಾಲ್ಲೋಕ, ಗುಂತಕಲ್ ರೈಲ್ವೆ ನಿಲ್ದಾಣದಿಂದ ದಕ್ಷಿಣದಿಕ್ಕಿನಲ್ಲಿ ಸುಮಾರು ನಾಲ್ಕು ಮೈಲುಗಳ ದೂರದಲ್ಲಿದೆಯೆಂದು ಹೇಳಿದೆ.

೧೨ ಜಹ ಣ ವಿ ಸಕ್ಕಮಣಜ್ಜೋ ಅಣಜ್ಜಭಾಸಂ ವಿಣಾ ಉ ಗಹೇದುಂ।
ತಹ ವವಹಾರೇಣ ವಿಣಾ ಪರಮತ್ಥುವದೇಸಣಮಸಕ್ಕಂ ॥ ೮ ॥
ವವಹಾರೋಭೂದತ್ಥೋ ಭೂದತ್ಥೋ ದೇಸಿದೋ ದೇಸಿದೋ ದು ಸುದ್ಧಣಓ ।
ಭೂದತ್ಥಮಸ್ಸಿದೋ ಖಲು ಸಮ್ಮಾದಿಟ್ಠೀ ಹವದಿ ಜೀವೋ ॥ ೧೧ ॥

೧೩ ಜರ್ನಲ್, ಬಾಂಬೇ ಬ್ರ್ಯಾಂಚ್ ರಾಯಲ್ ಏಸಿಯಾಟಿಕ್ ಸೊಸೈಟಿ ವಾಲ್ಯೂಂ **XVII** ೧೮೮೭. ಪು. ೩೭೪ ದರ್ಶನಸಾರ–ಭಟ್ಟಾರಕ ದೇವಸೇನ.

ಜಇ ಪಉಣಂದಿಣಾಹೋ ಸೀಮಂದರಸಾಮಿದಿವ್ವಣಾಣೇಣ ।
ಣವಿವೋಹೈ ತೋ ಸಮಣೋ ಕಹಂ ಸುಮಗ್ಗ ಪಯಾಣಂತಿ ॥ ೪೩ ॥
ಇದರ ಸಮರ್ಥಕವಾದ ಹೇಳಿಕೆಗಳು ಜಯಸೇನಾಚಾರ್ಯರ, ಪಂಚಾಸ್ತಿಕಾಯದ, ಟೀಕೆಯಲ್ಲಿಹಾಗೂ ಶಾಸನಗಳಲ್ಲಿವೆ. ಈ ಬಗ್ಗೆ ಪೂ. ಸೂ. ಪ್ರ ಸಾರದ, ಡಾ ಆ. ನೇ. ಉಪಾಧ್ಯೆಯವರ ಮುನ್ನಡಿ ಪು. ೭, ೮. ನೋಡಿ.

೧೪ ಶ್ರೀ ಪಂಚಾಸ್ತಿಕಾಯ ಸಂಗ್ರಹ 'ಶ್ರೀ ವೀತರಾಗ ಸತ್ ಸಾಹಿತ್ಯ ಪ್ರಕಾಶಕಟ್ರಸ್ಟ್, ೬೦೨, ಕೃಷ್ಣನಗರ, ಭಾವನಗರ (ಗುಜರಾತ್) ಪ್ರಕಾಶನ ತೃತೀಯ ಸಂಸ್ಕರಣ, ಪು. ೩ ಅಡಿ ಟಿಪ್ಪಣಿ.

೧೫ ಪೂ. ಸೂ. ಪ್ರ. ಸಾರದ ಮುನ್ನಡಿ, ಪು. ೧೭–೧೮ ತಿಲೋಯಪಣ್ಣತ್ತಿ ಭಾಗ ೨ ಪು. ೬೧

೧೬ ಶೋಧಾದರ್ಶ ೨೨, ಪ್ರಕಾಶಕ : ತೀರ್ಥಂಕರ ಮಹಾವೀರ ಸ್ಮೃತಿ ಕೇಂದ್ರ ಸಮಿತಿ ಉತ್ತರ ಪ್ರದೇಶ, ಲಖನೌ, ಮಾರ್ಚ್ ೧೯೯೪ ಪು. ೭೫–೬_ಎಂ. ಡಿ ವಸಂತರಾಜ್ರಿಂದ ಸಂಪಾದಿತವಾಗಿರುವ ಮತ್ತು ಶ್ರೀ ದಿಗಂಬರ ಜೈನ್ ಟ್ರಸ್ಟ್ ೧೪೧, ರಂಗಸ್ವಾಮಿ ಟೆಂಪಲ್ ಸ್ಟ್ರೀಟ್, ಬೆಂಗಳೂರು ಇವರಿಂದ ಪ್ರಕಾಶಿತವಾಗಿರುವ 'ಬಾರಸಾಣುವೆಕ್ಖ'ದ ಸಮೀಕ್ಷೆ.

೧೭ ಉಬಯರಣಂ ಜಿಣಮಗ್ಗೇ ಲಿಂಗಂ ಜಹಾಜಾದ ರೂವಮಿದಿ ಭಣಿದಂ । (ಪ್ರವಚನ ಸಾರ ೩/೨೫) ಜಿನಮಾರ್ಗದಲ್ಲಿ (ಲಿಂಗಂ) ಮುನಿಧರ್ಮವು (ಜಹಾಜಾದರೂವಂ) ಹುಟ್ಟುವಾಗ ಯಾವ(ಬೆತ್ತಲೆಯ)ರೂಪವಿರುವುದೊ ಅದೇ ಉಪಕರಣವಾಗಿರುವುದು (ಶ್ರಾಮಣ್ಯಧರ್ಮ ಪರಿಪಾಲನೆಗೆ ಉಪಕಾರಿಯಾಗಿರುವುದು).

ಣ ವಿ ಸಿಜ್ಝ ಇ ವತ್ಥಧರೋ ಜಿಣ ಸಾಸಣೇ ಜ ಇ ವಿ ಹೋಇ ತಿತ್ಥಯರೋ।
ಣಗ್ಗೋ ವಿಮೋಕ್ಷಮಗ್ಗೋ ಸೇಸಾ ಉಮ್ಮಗ್ಗಯಾ ಸವ್ವೇ ॥ ೨೩ ॥

(ಅಷ್ಟಪಾಹುಡ–ಸೂತ್ರಪಾಹುಡ)

ತೀರ್ಥಂಕರನೇ ಆಗಿರಲಿ, ವಸ್ತ್ರಧರನಾಗಿದ್ದಲ್ಲಿ ಜಿನಶಾಸನದನುಸಾರ ಸಿದ್ಧಿ (ಮುಕ್ತಿ) ಪಡೆಯುವುದಿಲ್ಲ, ನಗ್ನತೆಯೇ ಮೋಕ್ಷಮಾರ್ಗ, ಮಿಕ್ಕೆಲ್ಲವೂ ಉನ್ಮಾರ್ಗಗಳು (ಉನ್ಮತ್ತ ಮಾರ್ಗಗಳು)

ಜರವಾಹಿದುಕ್ಖರಹಿಯಂ ಆಹಾರ–ಣಿಹಾರ–ವಜ್ಜಿಯಂ ವಿಮಲಂ ।
ಸಿಂಹಾಣ್–ಖೇಲ–ಸೇಓ ಣತ್ಥಿ ದುಗುಂಛಾ ಯ ದೋಸೋ ಯ ॥ ೩೭ ॥
ದಸಪಣಾ–ಪಜ್ಜತ್ತೀ ಅಟ್ಠಸಹಸ್ಸಾಯ ಲಕ್ಖಣಾ ಬಣಿಯಾ।

ಗೋಖೀರ ಸಂಖಧವಲಂ ಮಂಸಂರುಹಿರಂ ಚ ಸವ್ವಂಗೇ ॥ ೩೮ ॥

ಫರಿಸಗುಣೇಹಿಂ ಸವ್ವಂ ಐಸಯವಂತಂ ಸುಪರಿಮಲಾಮೋಯಂ ।

ಓರಾಲಿಯಂ ಚ ಕಾಯಂ ಣಾಯವ್ವಂ ಅರಹಪುರಿಸಸ್ಸ ॥ ೩೯ ॥

(ಅಷ್ಟಪಾಹುಡ–ಬೋಧಪಾಹುಡ)

ಮೇಲೆಹೇಳಿರುವ ಅರಹಂತನ ಅತಿಶಯಗುಗಳಲ್ಲಿ ಒಂದು 'ಆಹಾರವಜ್ಜಿಯಂ' ಆಹಾರ ವಿಲ್ಲದಿರುವುದನ್ನು ಗಮನಿಸಬಹುದು.

ಜಇ ಡಂಸಣೇಣಸುದ್ದಾ ಉತ್ತಾಮಗ್ಗೇಣ ಸಾವಿ ಸಂಜುತ್ತಾ ।

ಘೋರಂಚರಿಯ ಚರಿತ್ತಂ ಇತ್ಥೀಸು ಣ ಪವ್ವಯಾ ಭಣಿಯಾ ॥ ೨೫ ॥

(ಅಷ್ಟಪಾಹುಡ–ಸೂತ್ರಪಾಹುಡ)

ದರ್ಶನಶುದ್ಧಿ ಹೊಂದಿ ಶುದ್ಧರಿದ್ದರೂ ಜಿನಮಾರ್ಗದಲ್ಲಿ ನಡೆದಿದ್ದರೂ, ಘೋರವಾದ ಉಪವಾಸ ಮುಂತಾದ ತಪದ ಆಚರಣೆಯುಳ್ಳವರಾಗಿದ್ದರೂ, ಸ್ತ್ರೀಯರಲ್ಲಿ ಪ್ರವ್ರಜ್ಯೆ (ಮುನಿದೀಕ್ಷೆ)ಇಲ್ಲ. (ಪವ್ರಜ್ಯೆ ಇಲ್ಲದೆ ಮುಕ್ತಿ–ಇಲ್ಲ)

ಸಂತಿ ಧುವಂ ಪಮದಾಣಂ ಮೋಹಪದೋಸಾ ಭಯಂ ದುಗುಂಛಾಯ ।

ಚಿತ್ತೇ ಚಿತ್ತಾ ಮಾಯಾ ತಮ್ಹಾ ತಾಸಿಂ ಣ ಣಿವ್ವಾಣಂ ॥ ೯ ॥

(ಪ್ರವಚನ ಸಾರ ೩\೨೫ನೇ ಗಾಹೆ ಅನುಬಂಧ)

ಪ್ರಮದೆ (ಸ್ತ್ರೀ)ಯರಿಗೆ ಮೋಹಸಂಬಂಧಿಯಾದ ಬಹುದೋಷ, ದ್ವೇಷಭಾವಗಳು, ಭಯ,ದುರ್ಭಾವನೆಗಳು ನಿಶ್ಚಿತವಾಗಿ ಇರುವುವು. ಚಿತ್ತದಲ್ಲಿ ವಿಚಿತ್ರರೀತಿಯ ಮಾಯೆ ಇರುವುದು.ಆದ್ದರಿಂದ ಅವರಿಗೆ ನಿರ್ವಾಣ (ಮುಕ್ತಿ) ಇಲ್ಲ.

೧೮ ಪೂ. ಸೂ. ಪ್ರವಚನಸಾರ–ಮುನ್ನಡಿ ಪು. ೧೫. ಮತ್ತು ಪ್ರೊ. ಎ. ಎಪ್ ರುಡೋಲ್ಫ್ ಹೋ ಎರ್ ನಲ್ ಅವರ 'ದಿಪಟ್ಟಾವಲಿಸ್ ಆಫ್ ದಿ ಸರಸ್ವತೀ ಗಚ್ಛ 'ಪ್ರಬಂಧ' ಇಂಡಿಯನ್ ಆಂಟಿಕ್ವೆರಿ ವಾಲೂಂ **XXI** ಫೆಬ್ರವರಿ ೧೮೯೨–ಪು.೬೦, ಮತ್ತು ಇದೇ ಪುಟದ, ಅ. ಟಿ. ೩.

೧೯ ಎಪಿಗ್ರಾಫಿಯ ಕರ್ನಾಟಕ–ಶ್ರವಣ ಬೆಳಗೊಳ ಸಂಪುಟ ೨, ಕನ್ನಡ ಅಧ್ಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ–ಪ್ರಕಾಶನ ಡಾ. ಬಾ. ರಾ. ಗೋಪಾಲ್ ಅವರ 'ಪೀಠಿಕೆ' ಪು. ಸಂ **XIV** ಮತ್ತು **IXXVI.**

೨೦ ಈ ಮೇಲೆ ಹೇಳಿರುವ ಪಟ್ಟಾವಲಿ.

೨೧ ಮೇಲೆ ಹೇಳಿರುವ ಪಟ್ಟಾವಲಿ (ಎ). ಇಂ. ಆಂಟಿಕ್ವೆರಿ ವಾಲೂಂ **XX** ಅಕ್ಟೋಬರ್ ೧೮೯೧–ಪು. ೩೫೭.

೨೨ ಈ ಪಟ್ಟಾವಲಿಗಳಲ್ಲಿ ಅಂಕಿತಗೊಂಡಿರುವ ಸಂವತ್ಸನ್ನು ಉತ್ತರಭಾರತ ಪದ್ಧತಿಯನ್ನನುಸರಿಸಿ ವಿಕ್ರಮ ಸಂಪತ್ತೆಂದು ಗಣನೆ ಮಾಪ್ಲಿರುವಂತೆ ಕಂಡು ಬರುತ್ತದೆ. ಈಚಿನ ಶೋಧನೆಯಿಂದ ಇದನ್ನು ಶಾ. ಶಕ ಸಂವತ್ತೆಂದು ಗಣನೆ ಮಾಡಬೇಕಾಗಿದೆಯೆಂದು ಪರಿಷ್ಕರಣ ಮಾಡಲಾಗಿದೆ. ಈ ಬಗ್ಗೆ ಷಟ್ ಖಂಡಾಗಮ ಸತ್ಪ್ರರೂಪಣಾ ೧ ಪಿಠಿಕೆ ಪು. ೩೫–೮೫ ನೋಡಿ.

೨೩ ಪೂ. ಸೂ. ನಂ. ಆ. ಪಟ್ಟಾವಲಿ, ಇಂಡಿಯನ್ ಆಂಟಿಕ್ವೆರಿ ವಾಲ್ಯೂಂ **XXI-**

೨೪ ಶ್ವೇತಾಂಬರ ಪಂಥದ ಅಗ್ರಗಣ್ಯ ವಿ ದ್ವದ್ವರೇಣ್ಯರಾದ ಸನ್ಮಾನ್ಯ ಮಾಲ್ವಾನಿಯಾ ಅವರು ನನ್ನಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಶ್ರವಣ ಬೆಳಗುಳದ ದೊಡ್ಡ ಬೆಟ್ಟದ ಸಿದ್ಧರ ಬಸದಿಯ ೩೫೦ (೨೫೪)ನೇ ನಂಬರಿನ ಶಾಸನದಲ್ಲಿ (ಮಹಾಪುರಾಣದ ಉತ್ತರ ಪುರಾಣ ರಚನಕಾರರಾದ) ಗುಣಭದ್ರಸ್ವಾಮಿಯವರ ಅನಂತರದಲ್ಲಿ ಅರ್ಹದ್ಬಲಿ, ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಯವರುಗಳನ್ನು ಹೆಸರಿಸಲಾಗಿದ್ದು, ಇವರ ಅನಂತರ ಕಾಲದಲ್ಲಿಯೇ ಕುಂದ ಕುಂದಾಚಾರ್ಯರು ಇದ್ದಿರಬೇಕಾದುದರಿಂದ ಇವರು ಕ್ರಿ. ಶ. ೮ನೇ ಶತಮಾನದ ಅನಂತರದವರಾಗಿರುವರೆಂಬುದು ಈ ಮಾನ್ಯರ ವಾದ. ಇವರಂತೆ ಡಾ. ಡಾಕಿಯವರೂ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ ಎಂದು ಸನ್ಮಾನ್ಯ ಡಾ. ಪಾಲ್ ಡಂಡಸಾ ಅವರು ಮಾತಿನ ಸಂದರ್ಭದಲ್ಲಿ ಹೇಳಿದರು. ಆದರೆ ಶ್ರ. ಬೆಳಗುಳದ ಹೆಚ್ಚಿನ ಸಂಖ್ಯೆಯ ಶಾಸನಗಳಲ್ಲಿ ಪೂಜ್ಯಪಾದ, ಸಮಂತಭದ್ರ, ಉಮಾಸ್ವಾತಿ ಆಚಾರ್ಯರುಗಳಿಂತ ಪೂರ್ವಕಾಲೀನರನ್ನಾಗಿ ಕಾಣಿಸಲಾಗಿದೆಯೆಂಬುದನ್ನು ಈ ಬಗ್ಗೆ ಗಮನಿಸಬೇಕಾಗಿದೆ.

೨೫ ಬಾರಸ ಅಣುವೆಕ್ಖದ ೨೫ರಿಂದ ೨೯ನೇ ಗಾಹೆ, (ಕನ್ನಡ ಟೀಕೆಯನ್ನನುಸರಿಸಿ ಪ್ರಕಾಶಿತವಾಗಿರುವ–ಎಂ. ಡಿ. ವಸಂತರಾಜ್ ಸಂಪಾದಿತ ಕೃತಿಯನುಸಾರ ೨೬೦ರಿಂದ ೩೦ನೇ ಗಾಹೆ) ಪರ್ಯಾಂತದ ೫ ಗಾಹೆಗಳನ್ನು ಸೂತ್ರ ೨/೧೦ ರ ಟೀಕೆಯಲ್ಲಿ ಉಲ್ಲೇಖಿಸಿದೆ. ಪಂಚಾಸ್ತಿ ಕಾಯದ ೬೪ನೇ ಗಾಹೆಯನ್ನು (ಸ. ಸಿದ್ಧಿ) ಸೂತ್ರ ೪/೧೪ರ ಟೀಕೆಯಲ್ಲಿ ಮತ್ತು ೭ನೇ ಗಾಹೆಯನ್ನು ಸೂತ್ರ ೫/೧೬ರ ಟೀಕೆಯಲ್ಲಿ ಉಲ್ಲೇಖಿಸಿದೆ. ಪ್ರವಚನಸಾರದ ಗಾಹೆ ೩/೧೭ (೧), ಗಾಹೆ ೩/೧೭ (೨) ಮತ್ತು ಗಾಹೆ ೩/೧೭ನ್ನೂ ಸೂತ್ರ ೩/೧೭ರ ಟೀಕೆಯಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿ (೧೦) ಮತ್ತು (೨) ಶ್ರೀ ಜಯಸೇನಾಚಾರ್ಯರ ತಾತ್ಪರ್ಯವೃತ್ತಿಅಯಲ್ಲಿ ಅಂತರ್ಗತವಾಗಿವೆ. ನೋಡಿ. ಪೂ. ಸೂ. ಪ್ರವಚನಸಾರ.

೨೬ ವಾಚಕ ಉಮಾಸ್ವಾತಿ ವಿರಚಿತ ತತ್ತ್ವಾರ್ಥಸೂತ್ರ–ವಿವೇಚಕ ಪಂ. ಸುಖಲಾಲ್ ಸಂಘ ವಿ– ಪ್ರಕಾಶನ–ಪಾರ್ಶ್ವನಾಥ ವಿದ್ಯಾಶ್ರಮ ಶೋಧ ಸಂಸ್ಥಾನ, ವಾರಾಣಾಸೀ–೫–ಸಂಶೋಧಿತ ಏವಂ ಪರಿವರ್ಧಿತ ತೃತೀಯ ಸಂಸ್ಕರಣ–೧೯೭೬. ಪ್ರಸ್ತಾವನಾ ಪು. ೮–೧೦

೨೭ ಈ ಬಗ್ಗೆ ವಿಶೇಷ ಮಾಹಿತಿಗಾಗಿ ಆಚಾರ್ಯ ಶ್ರೀ ಕುಂದಕುಂದದೇವರ ದ್ವಿಸಹಸ್ರಾಬ್ಧ ಮಹೋತ್ಸವ ಸ್ಮರಣ ಸಂಚಿಕೆ,, ಕರ್ನಾಟಕ ದಿಗಂಬರ ಜೈನ ಮಹಾಮಂಡಲ ಬೆಂಗಳೂರು– ಇವರಿಂದ (ಏಪ್ರಿಲ್ ೧೯೯೨) ಪ್ರಕಾಶಿತವಾಗಿರುವ 'ಅಕ್ಷಯ'ದಲ್ಲಿ ಈ ಗ್ರಂಥ ಲೇಖಕನ ಲೇಖನ–'ಕುಂದಕುಂದರು ಮತ್ತು ತತ್ತ್ವಾರ್ಥ ಸೂತ್ರದ ಮೇಲೆ ಆಚಾಯಕುಂದಕುಂದರ ಪ್ರಭಾವ' (ಪು. ೩೩–೪೨) ನೋಡಬಹುದು.

೨೮ ಪೂ. ಸೂ. 'ಜೈನ ದರ್ಶನ್ ಮನನ್ ಔರ್ ಮೀಮಾಂಸಾ' (ಪು.೧೦೧)

೨೯ ನ ಸೋ ಪರಿಗ್ಗಹೋ ವುತ್ತೋ ನಾಯಪುತ್ತೇಣ ತಾಇಣಾ।
ಮುಚ್ಛಾಪರಿಗ್ಗಹೋ ವುತ್ತೋ ಇಇವುತ್ತಂ ಮಹೇಸಿಣಾ ॥ ದಶವೈಕಾಲಿಕ ಸೂತ್ರ ೬/೨೧

೩೦ ಮೇಲೆ ಕಾಣಿಸಿರುವ 'ಅಕ್ಷಯ'ದಲ್ಲಿರುವ ಲೇಖನದಲ್ಲಿ ಪ್ರಮಾದವಶವಾಗಿ ಅಸಾವಧಾನತೆಯಿಂದ 'ಕುಂದಕುಂದರ ಗ್ರಂಥಗಳಲ್ಲೆಲಿಯೂ ಮೂರ್ಛಾಪದದ ಮೂಲಕ ಪರಿಗ್ರಹದ ಲಕ್ಷಣವನ್ನು (ನನಗೆ ತಿಳಿದ ಮಟ್ಟಿಗೆ) ಹೇಳಿರುವುದು ಕಂಡುಬರುವುದಿಲ್ಲ' ಎಂದು ಹೇಳಿದೆ. ಈ ತಪ್ಪು ಮಾಹಿತಿಗಾಗಿ ತೀವ್ರ ವಿಷಾದವಾಗಿದೆ.

೩೧ 'ಬಾಹ್ಯದ್ರವೇ ಮಮತ್ವ ಬುದ್ಧಿರ್ಮೂರ್ಛಾ' ಪ್ರ. ಸಾರ.ದ ಗಾಹೆ ೩/೬ರ, ಜಯಸೇನಾ ಚಾರ್ಯ ತಾತ್ಪರ್ಯ ವೃತ್ತಿ ಟೀಕೆ.

೩೨ ಷಟ್ ಖಂಡಾಗಮ, ಸತ್ಪ್ರರೂಪಣಾ ೧ರ (ಅಮರಾವತೀ ಪ್ರಕಾಶನ) ಪ್ರಸ್ತಾವನಾ ಪು. ಸಂ. ೫೪.

೩೨ ಪೂ. ಸೂ. ತತ್ವಾರ್ಥ ಸೂತ್ರ ಪ್ರಸ್ತವನಾ ಪು. ಸಂ. ೧೮

೩೩ ಇದೇ ಮೇಲೆ ಹೇಳಿದ ಗ್ರಂಥ ಪ್ರಸ್ತಾವನಾ ಪು. ಸಂ. ೨

೩೪ ವೀತರಾಗ ಸತ್ ಸಾಹಿತ್ಯ ಪ್ರಸಾರಕ ಟ್ರಸ್ಟ್ ಪುಷ್ಪ ಸಂ. ೬–ಭಾವನಗರ ಪ್ರಕಾಶನ, ವೀ. ನಿ. ಸಂ. ೨೫೦೨–ನೋಡಿ.

೩೫ ಜರ್ಮನಿಯ ಆಲ್ಸಡಾರ್ಫ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿರುವರೆಂಬ ಹೇಳಿಕೆಯನ್ನು ಈ ಗ್ರಂಥ ಕರ್ತೃವು ಕೇಳಿರುವುದರ ಆಧಾರದಿಂದ ಇಲ್ಲಿ ಹೇಳಲಾಗಿದೆ. ಒಂದೊಮ್ಮೆ ಇದು ಅಸತ್ಯವಿದ್ದಲ್ಲಿ ಅದಕ್ಕಾಗಿ ತೀವ್ರ ವಿಷಾದ ವ್ಯಕ್ತಪಡಿಸುತ್ತೇನೆ.

೩೬ ಉದಾಹರಣೆಯಾಗಿ :

ಜಂ ಮಯಾ ದಿಸ್ಸದೇ ರೂವಂ ತಂ ಣ ಜಾಣದಿ ಸವ್ವಹಾ ।
ಜಾಣಗೋ ದಿಸ್ಸದೇ ಣಂ ತಂ ತಮ್ಹಾ ಜಂಪೇಮಿ ಕೇಣ ಹಂ ॥ (ಮೋ. ಪಾ. ೨೯)
ಯನ್ಮಯಾ ದೃಶ್ಯತೇ ರೂಪಂ ತನ್ನ ಜಾನತಿ ಸರ್ವಥಾ ।
ಜಾನನ್ ನ ದೃಶ್ಯತೇ ರೂಪಂ ತತಃ ಕೇನ ಬ್ರವೀಮ್ಯಹಂ ॥ (ಸಮಧಿತಂತ್ರ ೧೮)

ಹೀಗೆಯೇ ಕುಂದಕುಂದರ ಕೃತಿಗಳ ಇನ್ನೂ ಅನೇಕ ಗಾಹೆಗಳ ಸಾಮ್ಯತೆಯನ್ನು ಪೂಜ್ಯಪಾದರ

'ಸಮಾಧಿತಂತ್ರ' ಮತ್ತು ಇಷ್ಟೋಪದೇಶಗಳಲ್ಲಿ ಗುರುತಿಸಬಹುದು. ಇನ್ನೂ ಹೆಚ್ಚಿನ ವಿವರಣಗೆ ಭಾರತೀಯ ಜ್ಞಾನ ಪೀಠ ಪ್ರಕಾಶನದ 'ಸರ್ವಾರ್ಥಸಿದ್ಧಿ'ಯಲ್ಲಿ ಪಂ. ಫೂಲ್‌ಚಂದ್ರಶಾಸ್ತ್ರಿಯವರ ಪ್ರಸ್ತಾವನೆ ಪು. ೮೭–೮೮ ನೋಡಿ.

೩೭ ನೋಡಿ ಡಾ. ಹೀರಾಲಾಲ್ ಜೈನ ಅವರ 'ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ' (ಕನ್ನಡ ಅನುವಾದ) ಪು. ೧೨೬.

೩೮ ಕುಂದಕುಂದರ ಎಲ್ಲ ಕೃತಿಗಳು ಒಳಗೊಂಡಿರುವ ವಸ್ತು ಅವುಗಳನ್ನು ಕುರಿತ ವಿಮರ್ಶೆಯ ಬಗ್ಗೆ ಡಾ. ಆ. ನೇ. ಉಪಾಧ್ಯೆಯವರಿಂದ ಸಂಪಾದಿತವಾಗಿರುವ ಪೂ. ಸೂ. ಪ್ರವಚನಸಾರದ ಪ್ರಸ್ತಾವನೆಯನ್ನು ನೋಡಬಹುದು. ಇದಲ್ಲದೆ 'ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ' ಯಲ್ಲಿಯೂ ಸಂಗ್ರಹವಾದ ವಸ್ತುವಿವರಣೆಯಿದೆ. ಕುಂದಕುಂದರ ಎಲ್ಲ ಕೃತಿಗಳನ್ನೂ ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂದಿರ ಟ್ರಸ್ಟ್, ಸೊನಗಡ (ಸಾರಾಷ್ಟ್ರ) ಅವರು ಪ್ರಕಾಶ ಪಡಿಸಿದ್ದಾರೆ.

೩೯ ಪೂ. ಸೂ. ಪ್ರವಚನಸಾರ, ಪ್ರಸ್ತಾವನೆ.

೪೦ ಮೂಲಾಚಾರ ಭಾಗ೨, ಭಾ. ಜ್ಞಾ. ಪೀ. ಪ್ರಕಾಶನ.

೪೧ ಪು. ಸಂ. ೨೪.

೪೨ ಶ್ರೀ ಎ. ಶಾಂತಿರಾಜಶಾಸ್ತ್ರಿಗಳವರಿಂದ ಸಂಪಾದಿತ 'ದಶಭಕ್ತಿ' ಪು. ಸಂ.೪೫ (ಆ) ಅಗ್ರಸ್ಯದ್ವಾದಶಾಂಗೇಷು ಪ್ರಧಾನಭೂತಸ್ಯ ವಸ್ತುನಃ ಅಯನಂ ಜ್ಞಾನಂ ಅಗ್ರಾಯಣಂ, ತತ್ಪ್ರಯೋಜನಮಗ್ರಾಯಣೀಯಂ : ತಚ್ಚ ಸಪ್ತಶತಸುನಯ ದುರ್ಣಯ ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ತ್ವ ನವಪದಾರ್ಥದೀನ್ ವರ್ಣಯತಿ, ಗೋ. ಜಿ. ಜೀ. ಪ್ರ. ಟೀ. ೩೬೬. ಪೂ. ಸೂ.ಸತ್ಪ್ರರೂಪಣಾ ಖಂಡ ೧, ಗ್ರಂ. ೧, ಪು. ಸಂ. ೧೧೬, ಅ. ಟಿ. ೧.

೪೩ ‘ಏಲಾಚಾರ್ಯ’ ಎಂಬ ಹೆಸರಿಗೆ ಸಂದಿರುವ ವಿಶಿಷ್ಟ ಗೌರವದ ಅರ್ಥ ವಿವರಣೆಯನ್ನು ಒಂದೆಡೆಯಲ್ಲಿ ಓದಿರುತ್ತೇನ. ಆದರೆ ಈಗ ಅದು ಎಲ್ಲಿ ಎಂಬುದರ ಮರೆವಾಗಿದೆ.

೪೪ ‘ತಿರುಕ್ಕುರುಳ್’ನ ಕರ್ತೃವಿನ ವಿಚಾರಕ್ಕೆ ಮಾನ್ಯ ಪ್ರೊ. ಎ. ಚಕ್ರವರ್ತಿಯವರ ’ಜೈನ ಲೀಟರೇಚರ್ ಇನ್ ತಮಿಳ್’ ಮತ್ತು ‘ತಿರುಕ್ಕುರಳ್’ನ ಇದೇ ಮಾನ್ಯರ ಪ್ರಸ್ತಾವನೆಗಳು ಮೂಲಾಧಾರವಾಗಿವೆ.

೪೫ ಪೂ. ಸೂ. ಇಂದ್ರನಂದಿಯವರ ಶ್ರುತಾವತಾರ ಪದ್ಯ ಸಂ. ೧೫೪–೧೬೪.

೪೬ ಸತ್ಪ್ರರೂಪಣಾ ೨–ಅಮರಾವತೀ ಪ್ರಕಾಶನ ೧೯೪೦, ಪ್ರಸ್ತಾವನಾ ಪ. ೩೭

೪೭ ಇದೇ ಮೇಲೆ ಹೇಳಿದ ಗ್ರಂಥ ಪ್ರಸ್ತಾವನಾ ಪು. ೩೯.

೪೮ ಜಯಧವಲಾ ಸಹಿತ–ಕಸಾಯ ಪಾಹುಡ, ಭಾಗ ೧ (ಪೆಜ್ಜದೋಸವಿಹತ್ತಿ) ಭಾ. ದಿ. ಜೈನ ಸಂಗ ಗ್ರಂಥಮಾಲಾ ಪ್ರಕಾಶನ, ಚೌರಾಸೀ, ಮಥುರಾ, ೧೯೪೪.

೪೯ ಈ ಪ್ರಸಂಗದಲ್ಲಿ ಹೇಳಿರುವ ವಿಷಯಗಳಿಗೆ ಈ ಮೇಲೆ ಹೇಳಿರುವ ಕಸಾಯಪಾಹುಡದ ಪ್ರಸ್ತಾವನೆ (ಪು.೪೩) ಆಧಾರವಾಗಿದೆ.

೫೦ ಷಟ್ಖಂಡಾಗಮ–ಸತ್ಪರೂಪಣಾ ೧ ಪ್ರಸ್ತಾವನಾ, ಪು. ೫೭.

೫೧ ಕಸಾಯ ಪಾಹುಡ–ಭಾಗ ೧.ಆಲ್ ಇಂಡಿಯಾ ದಿಗಂಬರ್ ಜೈನ್ ಸಂಘ, ಚೌರಾಸಿ,ಮಥುರಾ–೧೯೪೪ ಪ್ರಕಾಶನ–ಪ್ರಸ್ತಾವನಾ, ಪು. ೨೦ ಮತ್ತು ೪೪.

೫೨ ತತ್ತ್ವಾರ್ಥಸೂತ್ರ ಕೃತಿಯಲ್ಲಿ ಕುಂದಕುಂದಸ್ವಾಮಿಯವರ ಪಂಚಾಸ್ತಿಕಾಯ ಪ್ರವಚನಸಾರ,ನಿಯಮಸಾರ ಮತ್ತು ಅಷ್ಟಪಾಹುಡಗಳಲ್ಲಿರುವ ಅನೇಕ ಗಾಹೆಗಳ ವಾಕ್ಯಭಾಗಗಳು ಹೆಪ್ಪು ಹೆಪ್ಪಾಗಿ ಸಂಸ್ಕೃತ ಸೂತ್ರರೂಪದಲ್ಲಿ ಪರಿವರ್ತನೆ ಹೊಂದಿವೆ. ಹೀಗಲ್ಲದೆ ಗಾಹೆಗಳೊಡನೆ ಪದಶಃ ಹಾಗೂ ಅರ್ಥಶಃ ಸಂವಾದಿಯಾಗಿರುವ ಅನೇಕ ಸೂತ್ರಗಳಿವೆ. (ಈ ಬಗ್ಗೆ ಪ್ರಂಬಧವೊಂದನ್ನು ಕರ್ನಾಟಕ ದಿಗಂಬರ ಜೈನ ಮಹಾಮಂಡಲ ಬೆಂಗಳೂರು–೫೩, ಇವರು ೧೯೯೦–ಜನವರಿ ಮಾಹೆಯಲ್ಲಿ ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿಸಲಾಗಿದ್ದು ಅದನ್ನು ಇದೇ ಮಂಡಲದ ಮಹನೀಯರು ‘ಆಚಾರ್ಯಶ್ರೀ ಕುಂದಕುಂದ ದೇವರ ದ್ವಿಸಹಸ್ರಾಬ್ದ ಮಹೋತ್ಸವ–ಸ್ಮರಣ ಸಂಚಿಕೆ–‘ಅಕ್ಷಯ’ದಲ್ಲಿ ಪ್ರಕಟಪಡಿಸಿದ್ದಾರೆ, ಪು. ೩೩–೪೨)

ಕುಂದಕುಂದ ಸ್ವಾಮಿಯವರ ಗಾಹೆಗಳ ವಾಕ್ಯ ಭಾಗಗಳು ತತ್ತ್ವಾರ್ಥ ಸೂತ್ರದಲ್ಲಿ ಸೂತ್ರರೂಪ ಹೊಂದಿವೆ ಎಂಬುದನ್ನು ಒಪ್ಪಿ ಪಂಡಿತ ಪ್ರವರಸುಖಲಾಲ್‌ಜಿ ಸಂಘವಿಯವರು ಪಾರ್ಶ್ವನಾರ್ಥವಿದ್ಯಾಶ್ರಮ ಶೋಧ ಸಂಸ್ಥಾನ್ ವಾರಣಾಸೀ–೫–ಇವರಿಂದ ಪ್ರಕಾಶಿತವಾಗಿರುವ ತತ್ತ್ವಾರ್ಥ ಸೂತ್ರದ ಪ್ರಸ್ತಾವನೆಯಲ್ಲಿ ಮುಂದಿನಂತೆ ಹೇಳಿದ್ದಾರೆ.

"ಕುಂದಕುಂದರ ಪ್ರಾಕೃತ ವಚನಗಳೊಡನೆ ತತ್ತ್ವಾರ್ಥ(ಸೂತ್ರ)ದ ಸಂಸ್ಕೃತ ಸೂತ್ರಗಳು ಕೆಲೆವೆಡೆ ಪೂರ್ಣರೀತಿಯಿಂದ ಮತ್ತೆ ಕೆಲವೆಡೆ ಬಹುಕಡಿಮೆಯದಾದ ಸಾದೃಶ್ಯ ಹೊಂದಿವೆ. ಶ್ವೇತಾಂಬರ (ತತ್ತ್ವಾರ್ಥ) ಸೂತ್ರ ಪಾಠದಲ್ಲಿ ದ್ರವ್ಯದ ಲಕ್ಷಣವನ್ನು ಹೇಳುವ ಎರಡು ಸೂತ್ರ ಮಾತ್ರ ಇವೆ.

'ಉತ್ಪಾದವ್ಯಯ ಧ್ರೌವ್ಯಯುಕ್ತಂ ಸತ್ ।' (೫/೨೯) ಹಾಗೂ 'ಗುಣಪರ್ಯಾಯವದ್ ದ್ರವ್ಯಂ ।' (೫/೩೭) ಈ ಎರಡು ಸೂತ್ರಗಳಲ್ಲದೆ ದ್ರವ್ಯದ ಲಕ್ಷಣ ಹೇಳುವ ಮೂರನೆಯದಾದ ಒಂದು ಸೂತ್ರ ದಿಗಂಬರ ಸೂತ್ರ ಪಾಠದಲ್ಲಿದೆ-'ಸದ್ ದ್ರವ್ಯ ಲಕ್ಷಣಂ' (೫/೨೯) ದಿಗಂಬರ ಸೂತ್ರ ಪಾಠಗತವಾಗಿರುವ ಈ ಮೂರೂ ಸೂತ್ರಗಳು ಕುಂದಕುಂದರ ಪಂಚಾಸ್ತಿ ಕಾಯದ ಈ ಮುಂದಿನ ಪ್ರಾಕೃತ ಗಾಹೆಯಲ್ಲಿ ಪೂರ್ಣ ರೂಪದಲ್ಲಿ ಇವೆ.

ದವ್ವಂ ಸಲ್ಲಕ್ಖಣಿಯಂ ಉಪ್ಪಾದವ್ವಯ ಧುವತ್ತ ಸಂಜುತ್ತಂ ।
ಗುಣಪಜ್ಜಯಾಸಯಂ ವಾ ಜಂ ತಂ ಭಣ್ಣಂತಿ ಸವ್ವಣ್ಹೂ ॥ ೧೦ ॥

ಇದಲ್ಲದೆ ಕುಂದಕುಂದರ ಪ್ರಸಿದ್ಧ ಗ್ರಂಥಗಳೊಡನೆ ತತ್ತ್ವಾರ್ಥಸೂತ್ರದ ಯಾವ ಶಾಬ್ದಿಕ ಹಾಗೂ ವಸ್ತುಗತ ಸಾದೃಶ್ಯವಿರುವುದೋ ಅದು ಆಕಸ್ಮಿಕವಂತೂ ಅಲ್ಲ "ತತ್ತ್ವಾರ್ಥಸೂತ್ರವು ದಿಗಂಬರ ಪಂಥದ್ದು ಎಂಬುದರ ಸಮರ್ಥಕವಾಗಿರುವ ಮತ್ತೂ ಒಂದು ಗಮನಾರ್ಹ ಅಂಶವಿದೆ. ತೀರ್ಥಂಕರ ನಾಮಕರ್ಮಬಂಧಕ್ಕೆ ದಿಗಂಬರ ಅಮ್ನಾಯದನುಸಾರ ೧೬ ಭಾವನೆಗಳು ಕಾರಣವಾಗಿವೆ. ಷಟ್ಖಂಡಾಗಮದಲ್ಲಿ ಹೇಳಿರುವ ೧೬ ಭಾವನೆಗಳನ್ನೇ ತತ್ತ್ವಾರ್ಥ ಸೂತ್ರದಲ್ಲಿಯೂ ಹೇಳಿದೆ. (ಬಂಧಸಾಮಿತ್ತವಿಚಯ ಸೂತ್ರ ೪೦, ೪೧, ಜೈನ ಸಿದ್ಧಾಂತ ಭಾಸ್ಕರ, ಜೈನ ಆಂಟಿಕ್ವೆರಿ-ಭಾಗ ಕಿರಣ ೨,ಜವರಿ ೪೫-ಇದರಲ್ಲಿ ವಿದ್ವನ್ಮಾನ್ಯ ಶ್ರೀಯುತ ನ್ಯಾಯಾಚಾರ್ಯ ಪಂ. ದರಬಾರೀಲಾಲ್ ಜೈನ್ ಕೋಠಿಯಾ ಅವರ "ತತ್ತ್ವಾರ್ಥಸೂತ್ರ ಕೀ ಪರಂಪರಾ" ಎಂಬ ಲೇಖನ ನೋಡಿ) ಕುಂದಕುಂದ ಸ್ವಾಮಿಯವರು ಭಾವಪಾಹುಡದಲ್ಲಿ

'ವಿಸಯವಿರತ್ತೋ ಸಮಣೋ ಛದ್ದಸ (೧೬) ವರಕಾರಣಾಇಂ ಭಾಊಣ ।
ತಿತ್ಥಯರಣಾಮಕಮ್ಮಂ ಬಂಧಇ ಅಚೀರಣ ಕಾಲೇಣ ॥'

ಎಂಬುದಾಗಿ ೧೬ ಕಾರಣಗಳನ್ನೇ ಹೇಳಿದ್ದಾರೆ. ಆದರೆ ಶ್ವೇತಾಂಬರ ಪಂಥದ ಆಗಮದಲ್ಲಿ ೨೦ ಭಾವನೆಗಳನ್ನು ಹೇಳಿದೆ (ಈ ಮೇಲೆ ಹೇಳಿರುವ "ತತ್ತ್ವಾರ್ಥ ಸೂತ್ರಕೀಪರಂಪರಾ"ನೋಡಿ) ಈ ಕಾರಣಗಳಿಂದ ತತ್ತ್ವಾರ್ಥಸೂತ್ರದ ರಚನಕಾರ ಉಮಾಸ್ವಾಮಿ–ಗೃದ್ಧ್ರಪಿಂಛರು ದಿಗಂಬರ ಸಂಪ್ರದಾಯದವರೆಂದು ಹಾಗೂ ದಿಗಂಬರ ಆಮ್ನಾಯದ ನಂದಿ ಮುನಿ ಸಂಘದ ಆಚಾರ್ಯಪಟ್ಟಸ್ಥರಾಗಿರುವರೆಂಬುದೂ ಸಮರ್ಥಿತವಾಗುವುದು. ಆದರೆ ಯಾರು ಯಾರಿಗೆ ಎಷ್ಟೆಷ್ಟು ಪರೀಷಹಗಳಿರುವುದೆಂಬುದನ್ನು ತಿಳಿಸುವಲ್ಲಿ ಕೇವಲಿ ಜಿನಭಗವಂತನಿಗೆ 'ಹನ್ನೊಂದು ಪರೀಷಹಗಳಿರುತ್ತವೆ'–'ಏಕಾದಶಜಿನೇ' ಎಂಬ ಸೂತ್ರವು ಅದರ ವ್ಯಾಖ್ಯಾನಗಳು ಏನನ್ನೇ ಹೇಳಲಿ, ಸೂತ್ರರೂಪದಲ್ಲಿ ಯಂತೂ ದಿಗಂಬರ ಆಮ್ನಾಯಕ್ಕೆ ವಿರುದ್ಧವಾಗಿದೆ. ಆದ್ದರಿಂದ ಇದು ದಿಗಂಬರ ಆಮ್ನಾಯದೃಷ್ಟಿಯಿಂದ ಮತಭೇದವಾಗಿದೆಯೆಂದು ಗಣನೆ ಮಾಡಬೇಕಾಗುವುದು.

೫೩ ಪೂ. ಸೂ. ಕಸಾಯಪಾಹುಡ ಪ್ರಸ್ತಾವನಾ ಪು. ३೮

ಜೇಣ್ಹಿ ಕಸಾಯಆಹುಡಮಣೇಯಮುಜ್ಜಲಂ ಅಣಂತತ್ಥಂ ।
ಗಾಹಾಹಿ ವಿವರಿಯಂ ತಂ ಗುಣಹರಭಡಾರಯಂ ವಂದೇ ॥ ೬ ॥
ಗುಣಹರವಯಣ ವಿಣಿಗ್ಗಯ ಗಾಹಾರತ್ಥೋವಹಾರಿಓ ಸವ್ವೋ ।
ಜೇಣಜ್ಜಮಂಖುಣಾಸೋ ಸಣಾಗಹತ್ಥಿ ವರಂ ದೇಊ ॥ ೭ ॥
ಜೋ ಅಜ್ಜಮಂಖುಸೀಸೋ ಅಂತೇವಾಸೀ ವಿ ಣಾಗಹತ್ಥಿಸ್ಸ
ಸೋ ವಿತ್ತಿಸುತ್ತಕತ್ತಾ ಜಯಿವಸಹೋ ವರಂ ದೇಊ ॥ ೮ ॥ (ಪ್ರಾರಂಭಮಂಗಲ)

೫೪ ಪೂ. ಸೂ. ಕಸಾಯಪಾಹುಡ ಪ್ರಸ್ತಾವನಾ ಪು. ೪೪. 'ಆರ್ಯ ಮಂಗು ಅವರ ಶಿಷ್ಯ ಆರ್ಯನಂದಿಲ ಕ್ಷಪಣಾಂ . . .ಆರ್ಯನಂದಿಲ ಕ್ಷಪಕ ಶಿಷ್ಯಾಣಾಂ ಆರ್ಯನಾಗಹಸ್ತೀಣಾಂ'

೫೫ ಪೂ. ಸೂ. ಕಸಾಯಪಾಹುಡ ಪ್ರಸ್ತಾವನಾ ಪು. ೨೨, ಮತ್ತು ೨೩.

೫೬ ಚಉದಹಭೇದಾ ಭಣಿದಾ ತೇರಿಚ್ಛಾ ಸುರಾಗಣಾ ಚಉಬ್ಭೇದಾ ।

ಏದೇಸಿಂ ವಿತ್ಥಾರಂ ಲೋಯವಿಭಾಗೇಸು ಣಾದವ್ವಂ ॥೧೭ ॥

೫೭ ಜೈನ ಇತಿಹಾಸ್ ಔರ್ ಜೈನ ಸಾಹಿತ್ಯ ಪು. ೧ರಿಂದ ೨೧.

೫೮ ಪೂ. ಸೂ. ಕಸಾಯ ಪಾಹುಡ ಪ್ರಸ್ತಾವನಾ ೬೩.

೫೯ ಮೂಲಾಚಾರ.

೬೦ ಪೂ. ಸೂ. ಜೈನ ಸಾ. ಔರ್ ಇತಿಹಾಸ್ ಪು. ೧–೨೧ ಮತ್ತು ಪೂ. ಸೂ. ಕಸಾಯ ಪಾಹುಡ. ಪು. ೬೩.

೬೧ ಪೂ. ಸೂ. ಕಸಾಯ ಪಾಹುಡ ಪ್ರಸ್ತಾವನೆ ಪು. ೬೩, ೬೪ ಮತ್ತು ೬೫

೬೨ ಪೂ. ಸೂ. ಕ. ಪಾಹುಡ–ಪ್ರಸ್ತಾವನೆ, ಪು. ೩೪

೬೩ ಪೂ. ಸೂ. ಪೂಜ್ಯಪಾದಚರಿತೆ, ಸಂಧಿ ೩ ಶ್ಲೋ. ಸಂ. ೧೩೦ ರಿಂದ ೧೭೧

೬೪ ಪೂ. ಸೂ. ಇಂದ್ರನಂದಿಯವರ ಶ್ರುತಾವತಾರ ಶ್ಲೋ. ೧೬೧–೧೬೪.

೬೫ (೧)ಪೂ. ಸೂ. ತಪಾಗಚ್ಛಪಟ್ಟಾವಲಿ, ಇಂಡಿ. ಆಂಟಿಕ್ವೆರಿ ವಾಲ್ಯೂಂ ೧೧. ಪು. ೨೫೧.

(೨) ಪೂ. ಸೂ. ಜೈನೆದರ್ಶನ್, ಮನನ್ ಔರ್ ಮೀಮಾಂಸಾ ಪು. ೯೩.

(೩) ನಂದಿಸೂತ್ರ–ಸ್ಥವಿರಾವಲೀ, ಗಾಹೆ, ೨೮.

೬೬ ಷಟ್ ಖಂಡಾಗಮ–ಸತ್ ಪ್ರರೂಪಣಾ ಧವಲಾ ಪುಷ್ಪ ೧.ಜೈನ ಸಂಸ್ಕೃತಿ ಸಂರಕ್ಷಕ ಸಂಗ,
ಸೋಲಾಪುರ ಪ್ರಕಾಶನ, ಸಂ. ಸ್ವ. ಫೂಲ್ ಚಂದ್ರಸಿದ್ಧಾಂತ ಶಾಸ್ತ್ರಿ ಅವರು,
ಸಂಶೋಧಿತ ತೃತೀಯ ಆವೃತ್ತಿ ೧೯೯೨ ಎಡಿಟೋರಿಯಲ್ ನೋಟ್ ಪು. ೪.

೬೭ ಇಂದ್ರನಂದಿಯವರ ಶ್ರುತಾವತಾರ ಶ್ಲೋ. ೧೬೪–೧೬೭.

೬೮ ಪೂ. ಸೂ. ಷಟ್‌ಖಂಡಾಗಮ ಅಮರಾತಿ (ಆರಾ) ಪ್ರಕಾಶನ, ೧೯೩೯. ಪು. ೪೯, ೫೦, ಮತ್ತು ೫೧.

೬೯ ಪೂಜ್ಯಪಾದ ಚರಿತೆ (ಶ್ರುತಾವತಾರ) ಶ್ಲೋ. ಸಂ. ೧೨೬ರಿಂದ ೧೨೯.

೭೦ ಪೂ. ಸೂ. ಶ್ರುತಾವತಾರ, ಶ್ಲೋ. ೧೬೭–೧೭೦

೭೧ ನೋಡಿ, ಸರ್ವಾರ್ಥಸಿದ್ಧಿ, ಪಂ. ಫೂಲ್‌ಚಂದ್ರ ಸಿದ್ಧಾಂತ ಶಾಸ್ತ್ರಿಯವರಿಂದ ಸಂಪಾದಿತ, ಭಾರತೀಯ ಜ್ಞಾನಪೀಠ ಪ್ರಕಾಶನ ಪ್ರಸ್ತಾವನಾ. ಪು. ೫೬–೫೭. ವಿದ್ಯಾನಂದರ ಆಪ್ತ ಪರೀಕ್ಷೆಯಿಂದ ಉಲ್ಲೇಖಗಳು.

ಕಿಂ ಪುನಸ್ತತ್ಪರಮೇಷ್ಠಿನೋ ಗುಣಸ್ತೋತ್ರಂ ಸ್ತೋತ್ರಾದೌ ಸೂತ್ರಕಾರಾಃ ಪ್ರಾಹುರಿತಿ ನಿಗದ್ಯತೇ. ಆಪ್ತ ಪರೀಕ್ಷೆಯ ಉಪಸಂಹಾರದಲ್ಲಿ–

ಶ್ರೀಮತ್ತತ್ತ್ವಾರ್ಥ ಶಾಸ್ತ್ರಾದ್ಭುತ ಸಲಿಲನಿಧೇರಿದ್ಧರತ್ನೋದ್ಭವಸ್ಯ
ಪ್ರೋತ್ಥಾನಾರಂಭಕಾಲೇ ಸಕಲಮಲಭಿದೇ ಶಾಸ್ತ್ರಕಾರ್ಯೈಃ ಕೃತಂ ಯತ್ ।
ಸ್ತೋತ್ರಂ ತೀರ್ಥೋಪಮಾನಂ ಪ್ರಥಿತ ಪೃಥುಪಥಂ ಸ್ವಾಮಿ ಮೀಮಾಂಸಿತಂ ತತ್
ವಿದ್ಯಾನಂದ್ಯೈಃ ಸ್ವಶಕ್ತ್ಯಾ ಕಥಮಪಿ ಕಥಿತಂ ಸತ್ಯವಾಕ್ಯಾರ್ಥಸಿದ್ಧ್ಯೈ ॥ ೧೨೩ ॥
ಮತ್ತು
ಇತಿತತ್ತ್ವಾರ್ಥ ಶಾಸ್ತ್ರಾದೌ ಮುನೀಂದ್ರಸ್ತೋತ್ರಗೋಚರಾ ।
ಪ್ರತೀತಾಪ್ತಪರೀಕ್ಷೆಯಂ ವಿವಾದವಿನಿವೃತ್ತಯೇ ॥೧೨೪ ॥

೭೨ ಇದೇ ಮೇಲಿನ ಗ್ರಂಥ ಕಾರಿಕೆ ೩.

೭೩ ಆಪ್ತಪರಿಕ್ಷಾ–ಸಂಪಾದಕರು ಮತ್ತು (ಹಿಂದೀ) ಅನುವಾದಕರು–ನ್ಯಾಯಾಚಾರ್ಯ ಪಂ. ದರ್ಬಾರೀಲಾಲ್ ಜೈನ್, ಕೋಠಿಯಾ ಪ್ರಕಾಶನ–ವೀರ ಸೇವಾಮಂದಿರ, ಸರಸಾವ ಜಿಲ್ಲಾ, ಸಹಾರನ್‌ಪುರ್ ೧೯೪೯–ಪ್ರಸ್ತಾವನಾ, ಪು. ೭. ಮತ್ತು ನೋಡಿ–ಅಕಲಂಕ ಗ್ರಂಥ ತ್ರಯದ ಪ್ರಾಕ್ಕಥನ ನ್ಯಾಯಕುಮುಚಂದ್ರ ಪ್ರಸ್ತಾವನಾ, ಪು. ೨೫–೨೬.

೭೪ ಪೂ. ಸೂ. ಸರ್ವಾರ್ಥಸಿದ್ಧಿ ಪ್ರಸ್ತಾವನಾ ಪು. ೫೭. ೭೫ ಪೂ. ಸೂ. ಆಪ್ತಪರೀಕ್ಷಾ, ಪ್ರಸ್ತಾವನಾ ಪು. ೭.

೭೫ ಪೂ. ಸೂ. ಆಪ್ತಪರೀಕ್ಷಾ, ಪ್ರಸ್ತಾವನಾ ಪು. ೭.

೭೬ ದಶಾಧ್ಯಾಯೇ ಪರಿಚ್ಛಿನ್ನೇ ತತ್ವಾರ್ಥೇ ಪಠಿತೇ ಸತಿ ।
ಫಲಂ ಸ್ಯಾದುಪವಾಸಸ್ಯ ಭಾಷಿತಂ ಮುನಿಪುಂಗವೈಃ ॥

೭೭ ನೋಡಿ–ತತ್ವಾರ್ಥಸೂತ್ರ ಶ್ರೀ ಭಾಸ್ಕರನಂದಿ ವಿರಚಿತ ಸುಖಬೋಧಾಖ್ಯ ವೃತ್ತಿಯುತ–ಸಂಪಾದಕರು ಪಂ. ಎ. ಶಾಂತಿರಾಜಶಾಸ್ತ್ರಿ ಅವರು, ಮೈಸೂರು ವಿಶ್ವವಿದ್ಯಾಲಯ ಓರಿಯೆಂಟರ್ ಲೈಬ್ರರಿ ಪ್ರಕಾಶನ, ಪ್ರಸ್ತಾವನೆ, ಪು. ಸಂ. ೩೦–೩೧.

೭೮ ಪೂಜ್ಯಪಾದಾಚಾರ್ಯ ವಿರಚಿತಾ : ಸರ್ವಾರ್ಥಸಿದ್ಧಿ : ಪ್ರಕಾಶಕರು ರಾವ ಜೀಸಖಾರಾಂ ದೋಶಿ, ಕೊಲ್ಹಾಪುರ, ಶಕಾಬ್ದ ೧೮೩೯, ಭೂಮಿಕಾ ಪು. ೬, ೭.

೭೯ ಜೈನೇಂದ್ರ ವ್ಯಾಕರಣವು ಪ್ರಸ್ತುತ ದೇವನಂದಿ–ಪೂಜ್ಯಪಾದರ ರಚನೆಯಾಗಿರದೆ ದ್ವಾದಸಾಂಗ ಚತುರ್ದಶ ಪೂರ್ವಿಗಳಲ್ಲಿ ಎರಡನೆಯವರಾದ ಶ್ರುತಕೇವಲಿ ದೇವನಂದಿಯವರು ಇದರ ರಚನಕಾರರಾಗಿರುವರೆಂದು ಹೇಳಲು ಆಧಾರವಿದೆ. ಆದರೆ ದೇವನಂದಿ ಪೂಜ್ಯಪಾದರು ಜೈನೇಂದ್ರ ನ್ಯಾಸ ರಚನಕಾರರಾಗಿರುವರೆಂಬ ಶಿವಮೊಗ್ಗ ಜಿಲ್ಲೆ ನಗರ ತಾಲ್ಲೋಕಿನ ೪೬ನೇ ಶಾಸನದ ಮುಂದಿನ ಹೇಳಿಕೆಯ ಯಥಾರ್ಥತೆಯನ್ನು ಮಾನ್ಯ ಮಾಡಬೇಕಾಗಿದೆ.

ನ್ಯಾಸಂ ಜೈನೇಂದ್ರಸಂಜ್ಞಸಕಲ ಬುಧನುತಂ ಪಾಣಿನೀಯಸ್ಯ ಭೂಯೋ

ನ್ಯಾಸಂ ಶಬ್ದಾವತಾರಂ ಮನುಜತತಿಹಿತಂ ವೈದ್ಯಶಾಸ್ತ್ರಂ ಚ ಕೃತ್ವಾ ।

ಯಸ್ತತ್ವಾರ್ಥಸ್ಯ ಟೀಕಾಂ ವ್ಯರಚದಿಹ ತಾಂ ಭಾತ್ಯಸೌ ಪೂಜ್ಯಪಾದ

ಸ್ವಾಮೀ ಭೂಪಾಲವಂದ್ಯಃ ಸ್ವಪರಹಿತವಚಃ ಪೂರ್ಣ ದೃಗ್ಬೋಧ ವೃತ್ತಃ ॥

೮೦ ಸರ್ವಾರ್ಥಸಿದ್ಧಿ ಪ್ರಸ್ತಾವನೆ (ಪು. ೫೨–೫೫)

೮೧ ಮೇಲೆಹೇಳಿದುದು –ಪು. (೯೪–೯೬)

೮೨ ಅಷ್ಟಾಂಗಮತ್ರ ಸಮತಭದ್ರೈಃ ಪ್ರೋಕ್ತಂ ಸವಿಸ್ತರ ವಚೋವಿಭವೈರ್ವಿಶೇಷಾತ್ ।

ಸಂಕ್ಷೇಪತೋ ನಿಗದಿತಂ ತದಿಹಾತ್ಮ ಶಕ್ತ್ಯಾ ಕಲ್ಯಾಣಕಾರಕಮಶೇಷಪದಾರ್ಥಯುಕ್ತಂ ॥

ಉಗ್ರಾದಿತ್ಯಾಚಾರ್ಯರ 'ಕಲ್ಯಾಣ ಕಾರಕ' ಪ್ರಸ್ತಾವನಾ ಪು. ೩೧ ಮತ್ತು ೩೫.

೮೩ ಅಪನೀಯ ಮಹಾಬಂಧಂ ಷಟ್ ಖಂಡಾಚ್ಛೇಷ ಖಂಡೇ ತು ।

ವ್ಯಾಖ್ಯಾಪ್ರಜ್ಞಪ್ತಿಂ ಚ ಷಷ್ಠಂ ಖಂಡಂ ಚ ತತಃ ಸಂಕ್ಷಿಪ್ಯ ॥ ೧೭೪ ॥

ಷಣ್ಣಾಂ ಖಂಡಾನಾಮಿತಿ ನಿಷ್ಪನ್ನಾನಾಂ ತಥಾ ಕಷಾಯಾಖ್ಯ ।

ಪ್ರಾಭೃತಕಸ್ಯ ಚ ಷಷ್ಠಿ ಸಹಸ್ರಗ್ರಂಥಪ್ರಮಾಣಯುತಾಂ ॥ ೧೭೫ ॥

ವ್ಯಲಿಖತ್ ಪ್ರಾಕೃತ ಭಾಷಾರೂಪಾಂ ಸಂಯಕ್ ಪುರಾತನ ವ್ಯಾಖ್ಯಾಂ ।

ಅಷ್ಟಸಹಸ್ರಗ್ರಂಥಾಂ ವ್ಯಾಖ್ಯಾಂ ಪಂಚಾಧಿಕಾಂ ಮಹಾಬಂಧೇ ॥ ೧೭೬ ॥

೮೪ ತಿಲೋಯಪಣ್ಣತ್ತಿ ಭಾಗ ೨. ಮಾನ್ಯ ಆ. ನೇ. ಉಪಾಧ್ಯೆಯವರ ಪ್ರಸ್ತಾವನೆ ನೋಡಿ.

೮೫ ಪೂ. ಸೂ. ಪು. ೫೨.

೮೬ ಮಾನ್ಯ ಶಾಂತಿಲಾಲ್ ಅವರ ಟ್ರೆಡಿಷನಲ್ ಕ್ರಾನಾಲಜಿ ಆಫ್ ಜೈನ್ಸ್. ೮೭ ಪೂ. ಸೂ. ಷ.

ಆ. ಧ. ಪ್ರಸ್ತಾವನಾ. ಪು. ೬೦.

೮೮ ವಿಕ್ರಮಾರ್ಕ ಶಕಾಬ್ದೀಯ ಶತಸಪ್ತ ಸಮಾಜುಷಿ ।

ಕಾಲೇऽಕಲಂಕಯತಿನೋ ಬೌದ್ಧೈರ್ವಾದೋ ಮಹಾನ್ ಅಭೂತ್ ॥

(ಪೂ. ಸೂ. ಷ. ಆ. ಧ. ಪ್ರಸ್ತವನಾ. ಪು. ೪೦)

೮೯ ವಿಕ್ರಮನ ಮರಣಕಾಲವೆಂಬುದಾದ ಕಾಲಗಣನೆಯ ಬಗ್ಗೆ ಹಿಂದೆ ವಿವರಿಸಿದೆ. ಪ್ರಚಲಿತವಿರುವ ವಿ. ಸಂ ಗಣನೆಯಲ್ಲಿ ಇದು ೫೫೧ ನೇ ವರ್ಷದೊಡನೆ ಸಮಾಯುಕ್ತವಾಗುವುದು. ದೇವಸೇನರ ಹೇಳಿಕೆ.

ಸಿರಿಪುಜ್ಜಪಾದಸೀಸೋ ದಾವಿಡಸಂಘಸ್ಸ ಕಾರಗೋ ದುಟ್ಠೋ ।
ಣಾಮೇಣ ವಜ್ಜಣಂದೀ ಪಾಹುಡವೇದೀ ಮಹಾಸತ್ತೋ ॥
ಪಂಚಸಯೇ ಛವ್ವೀಸೇ ವಿಕ್ಕಮರಾಯಸ್ಸ ಮರಣಪತ್ತಸ್ಸ ।
ದಕ್ಖಿಣಮಹುರಾಜಾದೋ ದಾವಿಡಸಂಘೋ ಮಹಾ ಮೋಹೋ ॥

೯೦ ನೋಡಿ–ಶ್ರೀ ಉಗ್ರಾದಿತ್ಯಾಚಾರ್ಯಕೃತ 'ಕಲ್ಯಾಣಕಾರಕ' ಸಂಪಾದಕರು ಶ್ರೀ ಪಂ. ವರ್ಧಮಾನ ಪಾರ್ಶ್ವನಾಥ ಶಾಸ್ತ್ರೀ, ಪ್ರಕಾಶಕರು, ಶ್ರೀ ಸೇಠ್ ಗೋವಿಂದ ಜೀ ರಾವ್ ಜೀ ದೋಶೀ ಸೋಲಾಪುರ, ಪ್ರಸ್ತಾವನೆ, ಪು. ೩೧–೩೫.

೯೧ ಜೈನೇಂದ್ರಂ ನಿಜಶಬ್ದಭಾಗಮತುಲಂ ಸರ್ವಾಥಸಿದ್ಧಿಃ ಪರಾ
ಸಿದ್ಧಾಂತೇ ನಿಪುಣತ್ವ ಮುದ್ಧ, ಕವಿತಾಂ ಜೈನಾಭೀಷೇಕಃ ಸ್ವಕಃ ।
ಛಂದಃ ಸೂಕ್ಷ್ಮಧಿಯಂ ಸಮಾಧಿಶತಕಂ ಸ್ವಾಸ್ಥ್ಯಂ ಯದೀಯಂ ವಿದಾ–
ಮಾಖ್ಯಾತೀಹ ಸಪೂಜ್ಯಪಾದಮುನಿಪಃ ಪೂಜ್ಯೋಮುನೀನಾಂ ಗಣೈಃ ॥

ಶ್ರವಣಬೆಳಗುಳ ಶಾಸನ ಸಂ. ೬೪.

ಈ ಗ್ರಂಥ ಲೇಖಕನಲ್ಲಿರುವ ತಾಡ ಪತ್ರಗ್ರಂಥ ಜ್ಯೋತಿಷ ನಿಘಂಟುವಿನಲ್ಲಿ ಪ್ರಯಾಣವನ್ನು ಕುರಿತ ಶುಭಾಶುಬ ಹೇಳುವ ಪ್ರಸಂಗದಲ್ಲಿ 'ಭಾಷಿತಂ ಪೂಜ್ಯಪಾದ್ಯೈಃ' ಎಂದು ಹೇಳಿದೆ.